I

## ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು

ಬೆಂಗಳೂರಿನಲ್ಲಿ ಕೈಗೊಂಡ ತಮ್ಮ 64ನೆಯ
ಚಾತುರ್ಮಾಸ್ಯ ಸಂಕಲ್ಪದ ಸಂದರ್ಭದಲ್ಲಿ ನೀಡಿದ
ಗೀತಾ ಪ್ರವಚನದ ಸಾರ ಸಂಗ್ರಹ

# ಮಂತ್ರಾಕ್ಷತೆ

**(ಉಚಿತ ಕೊಡುಗೆ)**

ಪ್ರಕಾಶನ:
**ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚಾತುರ್ಮಾಸ್ಯ ಸಮಿತಿ**
ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ತರಿಗುಪ್ಪ ಮುಖ್ಯರಸ್ತೆ,
ಬೆಂಗಳೂರು-28

II

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರುಬೆಂಗಳೂರಿನಲ್ಲಿ ಕೈಗೊಂಡ ತಮ್ಮ
64ನೆಯ ಚಾತುರ್ಮಾಸ್ಯ ಸಂಕಲ್ಪದ ಸಂದರ್ಭದಲ್ಲಿ ನೀಡಿದ ಗೀತಾ ಪ್ರವಚನದ
ಸಾರ ಸಂಗ್ರಹ - ಮಂತ್ರಾಕ್ಷತೆ

20.08.2002

ಪ್ರತಿಗಳು : 1500

(ಉಚಿತ ಕೊಡುಗೆ)

ಪ್ರಕಾಶನ:
ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚಾತುರ್ಮಾಸ್ಯ ಸಮಿತಿ
ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ತರಿಗುಪ್ಪ ಮುಖ್ಯರಸ್ತೆ,
ಬೆಂಗಳೂರು-28

ಮುದ್ರಣ:
ಲಾವಣ್ಯ ಮುದ್ರಣ,
ಬೆಂಗಳೂರು.

III



## ಆಶೀರ್ವಚನ

ಚಾತುರ್ಮಾಸ್ಯದ ಪುಣ್ಯ ಸಂದರ್ಭದಲ್ಲಿ
ಶ್ರೀಕೃಷ್ಣನ ಮುಖಕಮಲದಿಂದ
ಹೊರ ಹೊಮ್ಮಿದ
ಶ್ರೀಮದ್ಭಗವದ್ಗೀತೆಯ
ಪ್ರವಚನವನ್ನು ಶ್ರದ್ಧಾ-ಭಕ್ತಿಗಳಿಂದ
ಶ್ರವಣ ಮಾಡಿರುವ ನಿಮ್ಮನ್ನು
ಶ್ರೀಮಧ್ವಾಂರ್ಗತ ಶ್ರೀಕೃಷ್ಣನು
ಅನುಗ್ರಹಿಸಲಿ.

ದಿನಾಂಕ
20.8.02

**ಶ್ರೀ ವಿಶ್ವೇಶತೀರ್ಥ ಶ್ರೀಪಾದರು**
ಶ್ರೀ ಪೇಜಾವರ ಅಧೋಕ್ಷಜ ಮಠ,
ಉಡುಪಿ

ಉಡುಪಿ ಶ್ರೀ ಪೇಜಾವರ ಮಠಾಧೀಶರಾದ
**ಪರಮಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು**
ಬೆಂಗಳೂರಿನಲ್ಲಿ ಕೈಗೊಂಡ ತಮ್ಮ 64ನೆಯ
ಚಾತುರ್ಮಾಸ್ಯ ಸಂಕಲ್ಪದ ಅವಧಿಯಲ್ಲಿ
ದಿನಾಂಕ 6.8.02 ರಿಂದ 20.8.02ರ ವರೆಗೆ
ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆಸಿರುವ
ಭಗವದ್ಗೀತಾ ಪ್ರವಚನದ ಸಂಗ್ರಹರೂಪವಾದ
ಈ ಕೃತಿಯ ಪ್ರಕಟಣೆಯ ವೆಚ್ಚವನ್ನು ನೀಡಿ
ಜಿಜ್ಞಾಸುಗಳಿಗೆ ಉಚಿತವಾಗಿ ತಲುಪುವಂತೆ
ಸಹಕರಿಸಿದ

**ಶ್ರೀ ಎಮ್.ಆರ್. ರಂಗನಾಥರಾಯರು**
ಮತ್ತು
**ಶ್ರೀ ಸಿ.ಎಮ್. ನಾಗೇಂದ್ರ**
ಇವರಿಗೆ

**ಕೃತಜ್ಞತೆಗಳು.**



**ಪ್ರತಿದಿನ ಶ್ರೀಪಾದರು ಉಪದೇಶಿಸುತ್ತಿದ್ದ ಗೀತಾಶ್ಲೋಕಗಳು.**

ಯತಃ ಪ್ರವೃತ್ತಿಃ ಭೂತಾನಾಂ ಯೇನ ಸರ್ವಮಿದಂ ತತಮ್ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

ನಮಃ ಪುರಸ್ತಾದಥ ಪೃಷ್ಠತಸ್ತೇ
ನಮೋಽಸ್ತು ತೇ ಸರ್ವತ ಏವ ಸರ್ವ ।
ಅನಂತವೀರ್ಯಾಮಿತವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ ॥

ಯತ್ರ ಯೋಗೇಶ್ವರಃ ಕೃಷ್ಣಃ ಯತ್ರ ಪಾರ್ಥೋ ಧನುರ್ಧರಃ ।
ತತ್ರ ಶ್ರೀರ್ವಿಜಯೋ ಭೂತಿಃ ಧ್ರುವಾ ನೀತಿರ್ಮತಿರ್ಮಮ ॥

# ಮಂತ್ರಾಕ್ಷತೆ

### ಭಗವದ್ಗೀತೆ ಇಂದಿಗೂ ಪ್ರಸ್ತುತ :

ಮಹಾಭಾರತ ಯುದ್ಧದಲ್ಲಿ ಅರ್ಜುನ ಬಂಧು ವ್ಯಾಮೋಹ ದಿಂದ ಕರ್ತವ್ಯ ವಿಮುಖನಾದಾಗ ಶ್ರೀಕೃಷ್ಣ ಅವನಿಗೆ ಭಗವದ್ಗೀತೆ ಯನ್ನು ಉಪದೇಶ ಮಾಡಿದ. ಈ ಉಪದೇಶ ಅರ್ಜುನನಿಗೆ ಮಾತ್ರ ಸಂಬಂಧಿಸಿರದೆ ನಮ್ಮೆಲ್ಲರಿಗೂ ಅನ್ವಯಿಸುತ್ತದೆ. ಅರ್ಜುನ ಕೌರವ-ಪಾಂಡವರ ಸೈನ್ಯದ ಮಧ್ಯದಲ್ಲಿ ನಿಂತು ಗೊಂದಲಕ್ಕೊಳಗಾದಂತೆ ನಾವೂ ಜೀವನದ ಅನೇಕ ಸಂದರ್ಭಗಳಲ್ಲಿ ಗೊಂದಲಕ್ಕೆ ಒಳಗಾಗುತ್ತೇವೆ. ನಮ್ಮಲ್ಲೂ ನಿರಂತರ ಕೌರವ-ಪಾಂಡವರ ಯುದ್ಧ ನಡೆಯುತ್ತಿರುತ್ತದೆ. ಶೀಲ, ವಿನಯ, ಶೌರ್ಯ, ಧೈರ್ಯ ಈ ಸದ್ಗುಣಗಳೇ ನಮ್ಮಲ್ಲಿರುವ ಪಾಂಡವರು. ಅಸೂಯೆ, ದ್ವೇಷ, ಮೋಸ, ವಂಚನೆ, ದುರಾಸೆ ಈ ದುರ್ಗುಣಗಳೇ ಕೌರವರು. ಪಾಂಡವರಂತೆ ನಮ್ಮಲ್ಲೂ ಸದ್ಗುಣಗಳ ಸಂಖ್ಯೆ ಕಡಿಮೆ, ಕೌರವ ರಂತೆ ದುರ್ಗುಣಗಳ ಸಂಖ್ಯೆ ಹೆಚ್ಚು. ಈ ಸದ್ಗುಣ-ದುರ್ಗುಣಗಳ ಹೋರಾಟ ನಮ್ಮ ಹೃದಯದಲ್ಲೂ ನಿರಂತರವಾಗಿ ನಡೆಯುತ್ತಿರುತ್ತದೆ. ಅನ್ಯಾಯ ಅಕ್ರಮಗಳನ್ನು ಮಾಡುವಾಗ ಆತ್ಮಸಾಕ್ಷಿ ವಿರೋಧಿಸುತ್ತದೆ; ದುರಾಸೆ ಪ್ರೇರೇಪಿಸುತ್ತದೆ.

ಕೌರವ-ಪಾಂಡವರ ಹೋರಾಟದಲ್ಲಿ ಪಾಂಡವರಿಗೇ



ವಿಜಯವಾದರೆ ನಮ್ಮ ಈ ಹೋರಾಟದಲ್ಲಿ ಕೌರವರಿಗೇ ಪಟ್ಟಾಭಿಷೇಕ; ದುರ್ಗುಣಗಳೇ ಗೆಲ್ಲುತ್ತವೆ. ಸದ್ಗುಣಗಳು ಸೋಲುತ್ತವೆ. ಅದಕ್ಕಾಗಿ, ಶ್ರೀಕೃಷ್ಣನ ಗೀತೋಪದೇಶ ನಮಗೂ ಬೇಕು. ಭಗವದ್ಗೀತೆಯ ಅಧ್ಯಯನದಿಂದ ನಮ್ಮಲ್ಲಿ ದೇವರ ಬಗ್ಗೆ ಮತ್ತು ಧರ್ಮಾಚರಣೆಯ ಬಗ್ಗೆ ಶ್ರದ್ಧೆ ಮೂಡಬೇಕು. ಆಗ ಎಲ್ಲೆಡೆಯಲ್ಲಿ ವ್ಯಾಪಿಸಿರುವ ದೇವರ ಕಣ್ಣು ತಪ್ಪಿಸಿ ನಾವು ಏನನ್ನೂ ಮಾಡಲಾರೆವು ಎನ್ನುವ ಎಚ್ಚರ ನಮ್ಮಲ್ಲಿ ಮೂಡುತ್ತದೆ. ಇದರಿಂದ ಅನ್ಯಾಯ-ಅನೀತಿ-ಅವ್ಯವಹಾರಗಳು ಕಡಿಮೆಯಾಗುತ್ತವೆ.

### ಇವರು ಧೀರರು :

ಸುಖದುಃಖಗಳಿಗೆ ಈ ದೇಹ-ಗೇಹಗಳಲ್ಲಿರುವ ಅಭಿಮಾನದ ಅತಿರೇಕವೇ ಕಾರಣ. ಮಗು ಅಳುವ ಧ್ವನಿ ಕೇಳಿದ ಕೂಡಲೇ ತಾಯಿಯ ಹೃದಯ ಮಿಡಿಯುತ್ತದೆ. ಪಕ್ಕದಲ್ಲಿರುವವರು 'ಅದು ನಿನ್ನ ಮಗುವಲ್ಲ' ಎಂದೊಡನೆ ಅವಳು ಸುಮ್ಮನಾಗುತ್ತಾಳೆ. ಹೀಗೆ ಸುಖದುಃಖಗಳಿಗೆ 'ನಾನು, ನನ್ನದು' ಎನ್ನುವ ಅಭಿಮಾನ ಕಾರಣ. ಅದನ್ನು ಕಿತ್ತೊಗೆದು ಸುಖದುಃಖಗಳಿಂದಾಗುವ ಮಾನಸಿಕ ಏರುಪೇರುಗಳನ್ನು ತಡೆಗಟ್ಟಬೇಕು.

***ಹೀಗೆ, ಇವೆಲ್ಲವೂ ಭಗವದಧೀನ ಎಂಬ ಎಚ್ಚರದಿಂದ ಅಭಿಮಾನವನ್ನು ತೊರೆದು ಪ್ರಪಂಚವನ್ನು ಎದುರಿಸುವವನೇ ಧೀರ.***



### ನಿರಾಸೆ ಬೇಡ :

ಕಳ್ಳನೂ ಕೆಲವು ದಿನ ಸುಖದಿಂದ ಬಾಳಿಯಾನು; ಕಹಿಯಾದ ಔಷಧ ಸೇವಿಸಿದರೂ ಕೂಡಲೇ ಕಾಯಿಲೆ ವಾಸಿಯಾಗದೇ ಉಳಿಯಬಹುದು. ಅದರಂತೆ, ಒಳ್ಳೆಯ ಕೆಲಸಗಳನ್ನು ಮಾಡಿದರೂ ಕಷ್ಟ - ನಷ್ಟಗಳು ಬಂದೊದಗಬಹುದು. ಕೆಟ್ಟ ಕಾರ್ಯ ಮಾಡಿದರೂ ವೈಭವದಿಂದ ಮೆರೆಯಬಹುದು. ಆದರೆ ಇದು ದೇವರ ರಾಜ್ಯ, ಇಲ್ಲಿ ಯಾರೂ ತಪ್ಪಿಸಿಕೊಳ್ಳಲಾರರು. ಎಲ್ಲರಿಗೂ ಅಂತಿಮವಾಗಿ ನ್ಯಾಯ ದೊರೆತೇ ದೊರೆಯುತ್ತದೆ.

***ಒಳ್ಳೆಯ ಕೆಲಸದಿಂದ ಎಂದೂ ಕೆಡುಕಾಗದು. ಕೆಟ್ಟ ಕೆಲಸದಿಂದ ಒಳ್ಳೆಯದೂ ಆಗದು.***

### ಅನ್ಯಾಯದ ವಿರುದ್ಧ ಪ್ರತಿಭಟಿಸಬೇಕು :

ಕೃಷ್ಣ ಸಂಧಾನಕ್ಕಾಗಿ ಹಸ್ತಿನಪುರಕ್ಕೆ ಹೋದ. ದುರ್ಯೋಧನ ವೈಭವದ ವ್ಯವಸ್ಥೆ ಮಾಡಿದ್ದ. ಕೃಷ್ಣ ಅವನ ಮನೆಗೆ ಹೋಗಲಿಲ್ಲ. ಅವನು ದುಷ್ಟ. ಭೀಷ್ಮನ ಮನೆಗೂ ಹೋಗಲಿಲ್ಲ. ಭೀಷ್ಮ ಕೃಷ್ಣನ ಭಕ್ತನಾದರೂ ದ್ರೌಪದಿಗೆ ಅವಮಾನವಾದಾಗ ಅದರ ವಿರುದ್ಧ ಧ್ವನಿ ಎತ್ತಲಿಲ್ಲ. ಅದಕ್ಕಾಗಿ ಶ್ರೀಕೃಷ್ಣ ಭೀಷ್ಮನ ಮನೆಗೂ ಹೋಗದೆ ವಿದುರನ ಮನೆಗೆ ಹೋದ.

***ಅನ್ಯಾಯವನ್ನು ಸ್ವತಃ ಮಾಡುವುದೂ ತಪ್ಪು, ಅನ್ಯಾಯ ನಡೆದಾಗ ಪ್ರತಿಭಟಿಸದಿರುವುದೂ ತಪ್ಪು.***

**ದೇವರು ಎಲ್ಲರನ್ನೂ ಏಕೆ ಉದ್ಧರಿಸುವುದಿಲ್ಲ :**

ಸೃಷ್ಟಿ ಎಂದರೆ ವಿಕಾಸ. ಬೀಜದಂತೆ ಮರ. ಮಾವಿನ ಓಟೆಯಿಂದ ಹಲಸಿನ ಮರ ಹುಟ್ಟದು. ಅದರಂತೆ ಸ್ವಭಾವತಃ ದುಷ್ಟನಾದವನು ಎಂದೂ ಸಜ್ಜನನಾಗಲಾರ. ದೇವರೂ ಅಂತಹವನನ್ನು ತಿದ್ದಲಾರ. ಆದ್ದರಿಂದಲೇ ಕೃಷ್ಣ ದುರ್ಯೋಧನನಿಗೆ ಗೀತೋಪದೇಶ ಮಾಡಲಿಲ್ಲ. ಅರ್ಜುನನಿಗಷ್ಟೇ ಗೀತೆಯನ್ನು ಉಪದೇಶಿಸಿದ.

**ತತ್ರ ತತ್ರ ಸ್ಥಿತೋ ವಿಷ್ಣುಃ ತತ್ತತ್‌ಶಕ್ತಿಪ್ರಬೋಧಕಃ ॥**

***ದೇವರು ಎಲ್ಲೆಡೆ ಇದ್ದು ವಸ್ತುಗಳ ಸ್ವಭಾವವು ವಿಕಾಸವಾಗುವಂತೆ ಮಾಡುತ್ತಾನೆ.***

**ನಮ್ಮಿಂದ ದೇವರಿಗೇನೂ ಬೇಕಿಲ್ಲ :**

ನಾವು ಪ್ರತಿದಿನ ದೇವರಿಗೆ ಷೋಡಶೋಪಚಾರ ಪೂಜೆ ಮಾಡುವ ಬದಲು ದೇಹಕ್ಕೇ ಆ ಪೂಜೆಯನ್ನು ಮಾಡುತ್ತಿದ್ದೇವೆ. ಕೆಲವೊಮ್ಮೆ ದೇವರಿಗೆ ಪೂಜೆ ಮಾಡಿದರೂ ಅವನಿಗೇನೋ ದೊಡ್ಡ ಉಪಕಾರ ಮಾಡಿದಂತೆ ತಿಳಿಯುತ್ತೇವೆ. ಆದರೆ ನಮ್ಮ ಕೊಡುಗೆಯಿಂದ ದೇವರಿಗೇನೂ ಆಗಬೇಕಿಲ್ಲ. ಅವನು ನಿಜಲಾಭತುಷ್ಟ, ಆಪ್ತಕಾಮ. ಆದರೆ, ಅವನನ್ನು ವೈಭವದಿಂದ ಆರಾಧಿಸಿದರೆ ಅವನು ನಮ್ಮನ್ನು ವೈಭವದಿಂದ ಮೆರೆಸುತ್ತಾನೆ.

ಹೀಗೆ ದೇವರಿಗೆ ಮಾಡಿದ ವೈಭವಗಳ ಲಾಭ ದೇವರಿಗಲ್ಲ, ನಮಗೇ.



**ಜೀವನಯಜ್ಞದ ಅವಭೃತ ಮರಣ :**

ಮರಣವೆಂಬುದು ಜೀವನದ ನೆರಳು. ಮರಣಕ್ಕೆ ಅಂಜುವುದು ನೆರಳಿಗೆ ಅಂಜಿದಂತೆ. ನೆರಳಿಗೆ ಅಂಜುವವನು ಕಳ್ಳ. ಅದರಂತೆ, ಜೀವನದಲ್ಲಿ ತಪ್ಪು, ಅನ್ಯಾಯ, ಅಕೃತ್ಯಗಳನ್ನು ಮಾಡಿದವರು ಮರಣಕ್ಕೆ ಅಂಜುತ್ತಾರೆ. ಅಹಿಂಸೆ, ಪರೋಪಕಾರ ಮುಂತಾದ ಸದ್ಗುಣಗಳನ್ನು ಬೆಳೆಸಿಕೊಂಡವರು ಎಂದೂ ಮರಣಕ್ಕೆ ಅಂಜುವುದಿಲ್ಲ.

ಜೀವನ ಒಂದು ಯಜ್ಞ. ಮರಣ ಆ ಯಜ್ಞದ ಅವಭೃತ. ಸತ್ಯ, ಅಹಿಂಸೆ ಈ ಜೀವನಯಜ್ಞದ ದಕ್ಷಿಣೆ. ಇಂತಹ ದಕ್ಷಿಣೆಯನ್ನು ನೀಡಿ ಜೀವನಯಜ್ಞವನ್ನು ಸಾಂಗವಾಗಿ ನಡೆಸಿದವರು ಮರಣವನ್ನು ಸಂತೋಷದಿಂದ ಸ್ವಾಗತಿಸುತ್ತಾರೆ.

***ನಿಶ್ಚಿಂತೆಯ ಮರಣಕ್ಕೆ ನಿಃಸ್ವಾರ್ಥ ಜೀವನವೇ ನಾಂದಿ.***

**ಕುಂಟು ನೆವ :**

ಅರ್ಜುನ ಈ ಹಿಂದೆ ಅನೇಕ ಬಾರಿ ಯುದ್ಧಗಳನ್ನು ಮಾಡಿದ್ದ. ನಿರ್ದಯವಾಗಿ ಶತ್ರುಗಳನ್ನು ಕೊಂದಿದ್ದ. ಆದರೆ, ಮಹಾಭಾರತದ ಯುದ್ಧದಿಂದ ಹಿಂದೆ ಸರಿದ. ಯುದ್ಧದಿಂದಾಗುವ ಅನರ್ಥ, ಹಿಂಸೆ, ಸಮಾಜಕ್ಕಾಗುವ ಹಾನಿ ಇವುಗಳನ್ನೆಲ್ಲ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ತನ್ನ ಸಾಮಾಜಿಕ ಕಳಕಳಿಯನ್ನು ಶ್ರೀಕೃಷ್ಣನ ಮುಂದೆ



ತೆರೆದಿಟ್ಟ. ರಾಜ್ಯದಾಸೆಗಾಗಿ ಮಾಡುವ ಈ ಅನರ್ಥಕ್ಕಿಂತ ಶತ್ರುಗಳ ಶಸ್ತ್ರಕ್ಕೆ ಮೈಯೊಡ್ಡಿ ಸಾಯುವುದೇ ಲೇಸು, ಎಂದೂ ವಾದಿಸಿದ.

ಆದರೆ ಶ್ರೀಕೃಷ್ಣ ಇದಕ್ಕೆ ಕಿವಿಗೊಡದೆ, ಅರ್ಜುನ ಹೇಳಿದ ಯುದ್ಧದ ದುಷ್ಪರಿಣಾಮಗಳ ಕಡೆಗೆ ತನ್ನ ಗಮನವನ್ನೇ ಹರಿಸಲಿಲ್ಲ. ಏಕೆ? ಅರ್ಜುನನ ನಿಜವಾದ ಸಮಸ್ಯೆ ಯುದ್ಧದಿಂದಾಗುವ ದುಷ್ಪರಿಣಾಮದ ಬಗ್ಗೆ ಅಂಜಿಕೆಯಲ್ಲ. ಬಂಧುವ್ಯಾಮೋಹ. ಕೌರವರು ಅನ್ಯಾಯವೆಸಗಿದ್ದರೂ 'ಅವರು ನಮ್ಮವರು' ಎನ್ನುವ ಕಾರಣದಿಂದ ಅರ್ಜುನ ಕ್ಷಮಿಸಿಬಿಡಲು ಸಿದ್ಧನಾದ. ಇದು ಹೃದಯದ ದೌರ್ಬಲ್ಯ. ಈ ದೌರ್ಬಲ್ಯವನ್ನು ಮುಚ್ಚಿಟ್ಟು ಯುದ್ಧದಿಂದಾಗುವ ಅನರ್ಥಗಳನ್ನು ಮುಂದಿಟ್ಟಿದ್ದಾನೆ. ಅರ್ಜುನನ ವಾದದ ಹಿನ್ನೆಲೆಯ ಈ ದೌರ್ಬಲ್ಯವನ್ನು ಕಿತ್ತೊಗೆಯಲು ಶ್ರೀಕೃಷ್ಣ ದೀರ್ಘವಾದ ಉಪದೇಶ ನೀಡಿದ.

ನಾವೂ ಅರ್ಜುನನಂತೆ ಮಾಡುವುದಿದೆ. ಹಣದ ಮೇಲಿನ ವ್ಯಾಮೋಹದಿಂದ ಸಾಮಾಜಿಕ, ಧಾರ್ಮಿಕ ಕಾರ್ಯಗಳಿಂದ 'ದುಂದುವೆಚ್ಚ' ಎಂಬ ನೆಪ ಒಡ್ಡಿ ಹಿಂದೆ ಸರಿಯುತ್ತೇವೆ.

***ನಿಷ್ಕಪಟವಾದ ವ್ಯಕ್ತಿತ್ವ ತೃಪ್ತಿಯ ಜೀವನದ ಸೋಪಾನ.***

**ಬಿಂಬ-ಪ್ರತಿಬಿಂಬ :**

ದೇವರು ಬಿಂಬ ನಾವು ಅವನ ಪ್ರತಿಬಿಂಬ. ಬಿಂಬದಂತೆ ಪ್ರತಿಬಿಂಬ. ದೇವರು ಕಲ್ಯಾಣತಮ ಚೈತನ್ಯರೂಪನಾದುದರಿಂದ

ನಾವೂ ಅವನಂತೆ ಚೈತನ್ಯರೂಪರು. ಜಡವಾದ ಈ ದೇಹ, ಇಂದ್ರಿಯಗಳೇ ನಾವಲ್ಲ.

ಬಿಂಬದಂತೆ ಪ್ರತಿಬಿಂಬ, ಬಿಂಬವೇ ಪ್ರತಿಬಿಂಬವಲ್ಲ. ನೀರಿನಲ್ಲಿರುವ ಸೂರ್ಯನ ಪ್ರತಿಬಿಂಬ ಸೂರ್ಯನಂತೆ ಕಂಡರೂ ಸೂರ್ಯನಂತೆ ಸುಡಲಾರದು. ಅದರಂತೆ ದೇವರಂತೆ ನಾವಾದರೂ ಅವನಂತೆ ಪೂರ್ಣರಲ್ಲ. ಅವನ ಅಧೀನರು.

ಹೀಗೆ ದೇವರ ಪ್ರತಿಬಿಂಬ ನಾವು ಎಂದು ತಿಳಿಯುವುದರಿಂದ ನಾವೂ ಚೈತನ್ಯಮೂರ್ತಿಗಳು ಎಂಬ ಸ್ವಾಭಿಮಾನ ಬೆಳೆಯುವುದರ ಜೊತೆಗೆ ನಾವು ದೇವರ ಅಧೀನರು ಎಂಬ ಭಾವ ಬೆಳೆದು ಅಹಂಕಾರ ನಾಶವಾಗುತ್ತದೆ.

**ನಿಷ್ಕಾಮ ಕರ್ಮ :**

ನಮ್ಮ ದೇಶದ ಪ್ರಾಚೀನ ದರ್ಶನ ಮೀಮಾಂಸಾ ದರ್ಶನ. ಅದು ಯಜ್ಞ-ಯಾಗಾದಿ ಕರ್ಮಗಳಿಗೇ ಪ್ರಾಶಸ್ತ್ಯ ನೀಡಿತು. ಭಗವಂತನ ಧ್ಯಾನ, ಅಪರೋಕ್ಷಗಳ ಮಾತೇ ಆ ಸಿದ್ಧಾಂತದಲ್ಲಿಲ್ಲ. ಮುಂದೆ ಬಂದ ಅದ್ವೈತ ದರ್ಶನ ಅಕರ್ಮವಾದವನ್ನು ಮಂಡಿಸಿತು. ಜ್ಞಾನ ಮಾತ್ರ ಸಾಕು, ಜ್ಞಾನಿಗಳಿಗೆ ಕರ್ಮದ ಆವಶ್ಯಕತೆ ಇಲ್ಲವೆಂದು ಹೇಳಿ ಆ ದರ್ಶನ ಕರ್ಮವನ್ನು ಗೌಣವಾಗಿಸಿತು.

ಭಗವದ್ಗೀತೆ ಇವೆರಡರ ಮಧ್ಯದ ವಾದವನ್ನು ಮಂಡಿಸಿದೆ.



ಕರ್ಮ, ಅದರಿಂದ ಸಿಗುವ ಫಲ ಇವೇ ಮುಖ್ಯವಲ್ಲ. ಫಲದ ಆಸೆಯನ್ನು ಬಿಟ್ಟು ಕರ್ಮವನ್ನು ಮಾಡಬೇಕು. ಫಲದಾಸೆ ಬಿಡಬೇಕು, ಕರ್ಮವನ್ನು ಮಾಡಬೇಕು. ಇದು ಶ್ರೀಕೃಷ್ಣನ ವಾದ. ಇದೇ ಗೀತೆ ಬೋಧಿಸಿದ ನಿಷ್ಕಾಮ ಕರ್ಮ.

ಹೀಗೆ, ನಿಷ್ಕಾಮ ಭಾವದಿಂದ ಕರ್ತವ್ಯವನ್ನು ನೆರವೇರಿಸಿದರೆ ವ್ಯಕ್ತಿತ್ವ ಉದಾತ್ತವಾಗುತ್ತದೆ. ಸಿಟ್ಟು, ದ್ವೇಷ, ದುರಾಸೆಗಳಿಂದ ಕರ್ತವ್ಯವನ್ನು ಮಾಡಿದರೆ ಪಾಪದ ಸೊಂಕು ತಗಲುತ್ತದೆ. ವೈದ್ಯರು ಶಸ್ತ್ರಚಿಕಿತ್ಸೆ ನಡೆಸುವಾಗ ಸೊಂಕು ತಗಲದಂತೆ ಕೈಚೀಲ ಹಾಕಿಕೊಳ್ಳುವಂತೆ ಕರ್ತವ್ಯವನ್ನು ನೆರವೇರಿಸುವಾಗ ಪಾಪದ ಲೇಪವಾಗದಂತೆ ನಿಷ್ಕಾಮ ಭಾವವನ್ನು ತಾಳಬೇಕು. ಕೊಲೆಗಾರ ದ್ವೇಷದಿಂದ ಮಾಡಿದ ಒಂದು ಕೊಲೆಯೂ ಪಾಪಕ್ಕೆ ಕಾರಣವಾದರೆ ನ್ಯಾಯಾಧೀಶ ನೂರು ಅಪರಾಧಿಗಳಿಗೆ ಮರಣದಂಡನೆ ವಿಧಿಸಿದರೂ ಪಾಪ ಬರುವುದಿಲ್ಲ.

***ದುಃಖದ ಮೂಲ ಅಭಿಮಾನ; ಪಾಪದ ಮೂಲ ಆಸಕ್ತಿ.***

**ನಿಷ್ಕಾಮ ಕರ್ಮದ ಲಾಭ :**

ಇಂದು ದೇಶದ ಅನೇಕ ವರ್ಗಗಳಲ್ಲಿ ಅಕ್ರಮವಾಗಿ ಹಣ ಗಳಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಈ ರೀತಿ ತಮ್ಮ ಕಾಮಭೋಗಕ್ಕಾಗಿ ಅನ್ಯಾಯದಿಂದ ಮಾಡುವ ದ್ರವ್ಯಸಂಪಾದನೆಯನ್ನು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಆಸುರ ಸ್ವಭಾವ ಎಂದು ನಿಂದಿಸುತ್ತಾನೆ.



ಆದರೆ 'ಕರ್ತವ್ಯ ಎಂಬ ದೃಷ್ಟಿಯಿಂದ ಕೆಲಸ ಮಾಡಬೇಕು; ಕೇವಲ ಪ್ರತಿಫಲದ ಅಪೇಕ್ಷೆಯೇ ಕರ್ತವ್ಯ ನಿರ್ವಹಣೆಯ ಗುರಿಯಾಗಬಾರದು' ಎನ್ನುವುದೇ ಶ್ರೀ ಕೃಷ್ಣ ನೀಡಿದ ಕರ್ಮದ ಸಂದೇಶ. ಗೀತೆ ಹೇಳಿದ ಈ ನಿಷ್ಕಾಮ ಕರ್ಮಾನುಷ್ಠಾನದಿಂದ ದೇಶದ ರಾಜಕೀಯ ಶುದ್ಧೀಕರಣವಾಗಲು ಸಾಧ್ಯವಿದೆ.

ನಿಷ್ಕಾಮ ಕರ್ಮವೆಂದರೆ 'ಯಾವ ಪ್ರತಿಫಲದ ಆಸೆಯೂ ಇಲ್ಲದೆ ಕೆಲಸ ಮಾಡುವುದು' ಎಂದು ಅರ್ಥವಲ್ಲ. ಹೊರತು, ನಮ್ಮ ಕೆಲಸದ ಉದ್ದೇಶ- ತುಚ್ಛ ಕಾಮನೆಯಾಗಿರಬಾರದು, ಉಚ್ಚ ಕಾಮನೆಯಾಗಿರಬೇಕು. ದೇಶಸೇವೆ, ಪರೋಪಕಾರ ದಂತಹ ಉದಾತ್ತಭಾವನೆಯಿಂದ ಕರ್ತವ್ಯದಲ್ಲಿ ತೊಡಗಬೇಕೇ ಹೊರತು, ನೀಚ ಸ್ವಾರ್ಥಕ್ಕಾಗಿ ದುಡಿಯಬಾರದು. ಇದೇ ಶ್ರೀಕೃಷ್ಣ ನೀಡಿದ ಸಂದೇಶ.

ಇಂತಹ ನಿಷ್ಕಾಮ ಕರ್ಮಾನುಷ್ಠಾನದಿಂದ ದೇಶದ ಕ್ಷೇಮದ ಜೊತೆಗೆ ನಮ್ಮ ಹೃದಯದ ನೈರ್ಮಲ್ಯವೂ ಉಂಟಾಗುತ್ತದೆ.

**ವೇದವು ಸಕಾಮಕರ್ಮವನ್ನು ಹೇಳುತ್ತಿಲ್ಲ :**

ನಾವು ಹಣವನ್ನು ಪಡೆದೂ ಶಿಕ್ಷಣ ನೀಡಬಹುದು; ಉಚಿತವಾಗಿಯೂ ಶಿಕ್ಷಣ ನೀಡಬಹುದು. ವೇದಗಳು ಸಂತತಿ, ಸಂಪತ್ತಿಗಾಗಿ ಕೆಲವು ಕರ್ಮಗಳನ್ನು ಹೇಳುತ್ತವೆ. ಅಂದಮಾತ್ರಕ್ಕೆ ಅದಕ್ಕಾಗಿಯೇ ಆ ಕರ್ಮಗಳನ್ನು ಮಾಡಬೇಕೆಂದು ವೇದದ

ಆಂತರ್ಯವಲ್ಲ. ಅವುಗಳನ್ನು ನಿಷ್ಕಾಮನೆಯಿಂದ ಮಾಡಿದರೂ ವೇದದ ಅಭಿಪ್ರಾಯಕ್ಕೆ ವಿರುದ್ಧವಾಗುವುದಿಲ್ಲ.

**ಈಸಬೇಕು-ಜಯಿಸಬೇಕು :**

ನಾವು ನದಿಯನ್ನು ದಾಟಬೇಕು; ನೀರು ಮುಟ್ಟಬಾರದು. ಇದು ಎಂದಾದರೂ ಸಾಧ್ಯವೇ? ನದಿ ದಾಟಬೇಕಾದರೆ ನೀರಿನಲ್ಲಿ ಧುಮುಕಲೇ ಬೇಕು. ನೀರಿಗೆ ಧುಮುಕಿ ಮುಳುಗದೆ ಕ್ಷೇಮವಾಗಿ ನದಿಯನ್ನು ದಾಟಬೇಕಾದರೆ ಈಜು ಕಲಿಯಬೇಕು. ಅದರಂತೆ, ಈ ಸಂಸಾರಸಾಗರದಲ್ಲಿ ಧುಮುಕಿ, ಮುಳುಗದೆ ದಾಟುವ ಕಲೆ ನಿಷ್ಕಾಮಕರ್ಮ.

**ಜ್ಞಾನಿಗೂ ಕರ್ಮ ಬೇಕು :**

ಬಂಗಾರವನ್ನು ಸಾಣೆಕಲ್ಲಿಗೆ ತಿಕ್ಕಿದಾಗ ಹೊಳಪು ಬರುತ್ತದೆ. ಅದರಂತೆ ನಮ್ಮನ್ನು ಕರ್ತವ್ಯವೆಂಬ ಸಾಣೆಕಲ್ಲಿಗೆ ಉಜ್ಜಬೇಕು. ಅಂದರೆ ನಮ್ಮ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸಬೇಕು. ಇದರಿಂದ ನಮ್ಮ ವ್ಯಕ್ತಿತ್ವ ಸಾಣೆ ಹಿಡಿದ ಬಂಗಾರದಂತೆ ಹೊಳಪನ್ನು ಪಡೆಯುತ್ತದೆ. ನಾವು ಸುಂದರ ವ್ಯಕ್ತಿತ್ವವನ್ನು ಪಡೆಯುತ್ತೇವೆ.

ಕರ್ತವ್ಯದ ಆಚರಣೆಯಿಂದ ಮನಸ್ಸು ಶುದ್ಧವಾಗುತ್ತದೆ. ನಿರ್ಮಲ ಮನಸ್ಸಿನಲ್ಲಿ ಭಗವಂತನ ಪ್ರತಿಕೃತಿ ಸುಲಭವಾಗಿ ಮೂಡುತ್ತದೆ. ಇದೇ ಧ್ಯಾನ. ಇದರಿಂದ ಭಗವದ್ದರ್ಶನವಾಗು



ತ್ತದೆ. ಅನಂತರವೂ ಕರ್ತವ್ಯದ ನಿರ್ವಹಣೆಯನ್ನು ಮಾಡಲೇ ಬೇಕು. ಅದರಿಂದ ಭಗವಂತ ಪ್ರಸನ್ನನಾಗಿ ಮೋಕ್ಷದಲ್ಲಿ ಹೆಚ್ಚಿನ ಆನಂದವನ್ನು ದೊರಕಿಸಿಕೊಡುತ್ತಾನೆ.

ಹೀಗೆ ಈ ಪ್ರಪಂಚದಲ್ಲಿ ಇರುವವರೆಗೂ ಯಾರಿಗೂ ಕರ್ತವ್ಯನಿರ್ವಹಣೆಯಿಂದ ವಿನಾಯಿತಿ ಇಲ್ಲ. ನಮ್ಮ ಕರ್ತವ್ಯವನ್ನು ನೆರವೇರಿಸುತ್ತಲೇ ನೂರು ವರ್ಷಗಳ ಕಾಲ ಬಾಳಬೇಕು. ಇದು ಉಪನಿಷತ್ತಿನ ಆದೇಶ.

**ಭಕ್ತಿ ಮತ್ತು ಕರ್ತವ್ಯ :**

ವ್ಯಾಪಾರದಲ್ಲಿ ಹಣ ತೊಡಗಿಸಿ ಮಧ್ಯದಲ್ಲಿ ಕೈಬಿಟ್ಟರೆ ಲಕ್ಷ, ಲಕ್ಷ ರೂಪಾಯಿ ನಷ್ಟವಾಗುತ್ತದೆ. ವೈದ್ಯರು ನೀಡಿದ ಔಷಧಿಯನ್ನು ತೆಗೆದುಕೊಳ್ಳುವಾಗ ಸ್ವಲ್ಪ ವ್ಯತ್ಯಾಸವಾದರೂ ರೋಗ ಉಲ್ಬಣಗೊಳ್ಳುತ್ತದೆ. ಆದರೆ, ದೇವರ ಮೇಲಿನ ಭಕ್ತಿಯಿಂದ ಕರ್ತವ್ಯದಲ್ಲಿ ತೊಡಗಿ ಮಧ್ಯದಲ್ಲಿ ಕೈಬಿಟ್ಟರೂ ಅದರಿಂದ ಅನರ್ಥವಿಲ್ಲ; ಕರ್ತವ್ಯ ನೆರವೇರಿಸುವಾಗ ಮಧ್ಯದಲ್ಲಿ ಲೋಪದೋಷಗಳು ಬಂದರೂ ಅನರ್ಥವಿಲ್ಲ.

**ಕಲಿಕಾಲ-ಪುಣ್ಯಕಾಲ :**

ಅರ್ಜುನ ಕರ್ಣನ ರಥವನ್ನು ಎರಡು ಯೋಜನದಷ್ಟು ದೂರ ಹಿಂದಕ್ಕೆ ಅಟ್ಟಿದ. ಕೃಷ್ಣ ಸುಮ್ಮನಿದ್ದ. ಕರ್ಣ ಅರ್ಜುನನ ರಥವನ್ನು ಎರಡು ಅಂಗುಲ ಹಿಂದೆ ಸರಿಸಿದ. ಶ್ರೀಕೃಷ್ಣ ಶಹಭಾಷ್‌ಗಿರಿ



ನೀಡಿದ. ಏಕೆಂದರೆ, ಅರ್ಜುನನ ರಥ ಈ ಭೂಮಿಯ ಪ್ರತಿರೂಪ. ಅದರ ಮೇಲೆ ಹನುಮಂತನಿದ್ದಾನೆ. ಅದರ ಸಾರಥಿ ವಿಶ್ವಂಭರನಾದ ಶ್ರೀಕೃಷ್ಣ. ಅಂತಹ ರಥವನ್ನು ಹಿಮ್ಮೆಟ್ಟಿಸುವುದು ದೊಡ್ಡ ಸಾಹಸ.

ಅದರಂತೆ, ಕೃತಯುಗದಲ್ಲಿ ಎಲ್ಲರೂ ಸತ್ಕಾರ್ಯಗಳನ್ನೇ ಮಾಡುತ್ತಿರುತ್ತಾರೆ. ಅಂತಹ ಪರಿಸರದಲ್ಲಿ ಪುಣ್ಯಕೆಲಸವನ್ನು ಮಾಡುವುದು ದೊಡ್ಡ ವಿಷಯವಲ್ಲ. ಕೆಟ್ಟ ಕೆಲಸ ಮಾಡುವುದೇ ದೊಡ್ಡ ಸಾಹಸ. ಆದರೆ, ಕಲಿಕಾಲ ಹಾಗಲ್ಲ. ಅಲ್ಲಿ ಕೆಟ್ಟವರೇ ಹೆಚ್ಚು. ಅಂತಹವರ ಮಧ್ಯದಲ್ಲಿ ಸತ್ಕರ್ಮವನ್ನು ಮಾಡಿದರೆ ಅದಕ್ಕೆ ಹೆಚ್ಚು ಫಲ. ಆದ್ದರಿಂದ ನಾವು ಕಲಿಕಾಲದಲ್ಲಿದ್ದೇವೆಂದು ನಿರಾಶರಾಗಬೇಕಿಲ್ಲ. ಇಲ್ಲಿ ಸತ್ಕರ್ಮಕ್ಕೆ ಹೆಚ್ಚು ಫಲ; ದುಷ್ಕರ್ಮಕ್ಕೆ ಫಲ ಕಡಿಮೆ.

**ಎಲ್ಲವೂ ಸರಿ ಎನ್ನುವುದು ಅಂಧಶ್ರದ್ಧೆ :**

ನಾವು ಯಾವ ಆಹಾರವನ್ನು ಸೇವಿಸಿದರೂ ಸರಿ, ಹೊಟ್ಟೆ ತುಂಬುತ್ತದೆ; ಹಸಿವು ಆರುತ್ತದೆ. ಆದರೆ, ಉಪ್ಪು, ಹುಳಿ, ಖಾರ ಈ ವಿವಿಧ ರಸಭರಿತ ಆಹಾರಗಳ ಪರಿಣಾಮ ಒಂದೇ ಅಲ್ಲ. ದೇಹಕ್ಕೆ ಯಾವುದೋ ಒಂದು ವಿಧದ ರಸ ಹಿಡಿಸುತ್ತದೆ.

ಅದರಂತೆ, ಎಲ್ಲ ದರ್ಶನಗಳೂ ಆಸ್ತಿಕ ದರ್ಶನಗಳೇ ಆದರೂ 'ಎಲ್ಲವೂ ಸರಿ; ಯಾವುದನ್ನು ಅರಿಸಿದರೂ ದೊರಕುವ ಫಲ

ಒಂದೇ' ಎನ್ನಲಾಗದು. ಸತ್ಯದ ದಾರಿ ಒಂದೇ. ಎಲ್ಲ ದರ್ಶನಗಳೂ ಇತರ ದರ್ಶನಗಳನ್ನು ನಿರಾಕರಿಸಿ ತಮ್ಮ ದರ್ಶನವೇ ಸರಿ ಎಂದು ವಾದಿಸುತ್ತಿರುವಾಗ 'ಎಲ್ಲವೂ ಸರಿ' ಎಂದು ನಾವು ಹೇಳಿದರೆ ಅದು ಹೇಗೆ ಸರಿಯಾದೀತು?

ಹಿಂದಿನದೆಲ್ಲ ಅಂಧಶ್ರದ್ಧೆ ಎಂದು ಹೇಳುವ 20ನೆಯ ಶತಮಾನದ ವಿಚಾರವಾದಿಗಳು 'ಎಲ್ಲವೂ ಸರಿ' ಎಂಬ ಅಂಧಶ್ರದ್ಧೆಗೆ ತಾವೇ ಒಳಗಾಗಿದ್ದಾರೆ.

**ಕಾಣದ ಮೋಕ್ಷಕ್ಕಾಗಿ ಏಕೆ ಹಂಬಲ? :**

ನಮ್ಮ ಮುಂದೆ ಎರಡು ವಿಕಲ್ಪಗಳಿವೆ- ಪ್ರಾಪಂಚಿಕ ಸುಖದ ಅಪೇಕ್ಷೆ, ಮೋಕ್ಷದ ಅಪೇಕ್ಷೆ. ಇವೆರಡರಲ್ಲಿ ಒಂದನ್ನು ಬಿಡಲೇ ಬೇಕು. ಮೋಕ್ಷ ಸಿಗಬೇಕಾದರೆ ಪ್ರಾಪಂಚಿಕ ಭೋಗಭಾಗ್ಯಗಳಲ್ಲಿ ವಿರಕ್ತಿ ತಾಳಬೇಕು. ಪ್ರಾಪಂಚಿಕ ಸುಖ ಸಿಗಬೇಕಾದರೆ ಮೋಕ್ಷದ ಅಪೇಕ್ಷೆಯನ್ನು ಬಿಡಬೇಕು. ಇವೆರಡರಲ್ಲಿ ಒಂದನ್ನು ಆರಿಸ ಬೇಕಾದಾಗ ಮೋಕ್ಷದ ಅಪೇಕ್ಷೆಯನ್ನು ಬಿಟ್ಟು ಪ್ರಾಪಂಚಿಕ ಸುಖವನ್ನೇ ಬಯಸುವುದು ಮೇಲು. ಏಕೆಂದರೆ, ಮೋಕ್ಷ ಕಾಣದ ಸುಖ. ಕಾಣದ ಕಾಲ್ಪನಿಕ ಮೋಕ್ಷಕ್ಕಾಗಿ ಹಾತೊರೆದು ಇರುವ ಪ್ರಾಪಂಚಿಕ ಸುಖವನ್ನು ತೊರೆಯುವ ಬದಲು ಮೋಕ್ಷದ ಆಸೆಯನ್ನು ಬಿಟ್ಟು ಪ್ರಾಪಂಚಿಕ ಸುಖದಲ್ಲೇ ಆಸಕ್ತಿಯನ್ನು ತಾಳುವುದು ಜಾಣತನ!



ಒಂದು ನಾಯಿ ಮಾಂಸದ ತುಂಡನ್ನು ಕಚ್ಚಿಕೊಂಡು ತನ್ನ ಪ್ರತಿಬಿಂಬವನ್ನು ನೀರಿನಲ್ಲಿ ನೋಡಿತು. ನೀರಿನಲ್ಲಿ ಕಾಣುವ ತನ್ನ ಪ್ರತಿಬಿಂಬ ನಿಜವಾದ ನಾಯಿ ಎಂದು ತಿಳಿದು, ಅದರ ಬಾಯಿಯಲ್ಲಿರುವ ಮಾಂಸದ ಚೂರನ್ನು ಕಬಳಿಸುವ ಉದ್ದೇಶದಿಂದ, ಜೋರಾಗಿ ಬೊಗಳಿತು. ಇದರಿಂದ ತನ್ನ ಬಾಯಿಯಲ್ಲಿದ್ದ ಮಾಂಸದ ತುಂಡನ್ನೂ ಕಳೆದುಕೊಂಡಿತು.

ಕಾಣದ, ಕಾಲ್ಪನಿಕ ಮೋಕ್ಷಸುಖಕ್ಕಾಗಿ ಇರುವ ಸುಖವನ್ನು ತೊರೆಯುವ ನಮ್ಮ ಪಾಡೂ ಇದಕ್ಕಿಂತ ಭಿನ್ನವಲ್ಲ. ಇದು ನಮ್ಮೆಲ್ಲರಿಗೂ ಬರಬಹುದಾದ ಒಂದು ಆಕ್ಷೇಪ.

ಇದಕ್ಕೆ ಶ್ರೀಕೃಷ್ಣ ನೀಡಿದ ಉತ್ತರ- ಮೋಕ್ಷದ ಸುಖ ಮಹಾಸುಖ. ಅದರ ಮುಂದೆ ಈ ಸಾಂಸಾರಿಕ ಸುಖ ಏನೂ ಅಲ್ಲ. ಅದು ಸೂರ್ಯನ ಮುಂದಿನ ಮಿಣುಕು ಹುಳದಂತೆ. 'ಸೂರ್ಯೋದಯವಾದರೆ ಮಿಣುಕುಹುಳದ ಪ್ರಕಾಶ ಹೋಗುತ್ತದೆ; ಆದ್ದರಿಂದ ಸೂರ್ಯ ಉದಯಿಸುವುದೇ ಬೇಡ' ಎಂದು ಯಾರಾದರೂ ಹೇಳುತ್ತಾರೆಯೇ? ಅದರಂತೆ ಮೋಕ್ಷಸುಖ ಸಿಕ್ಕಾಗ ಈ ಸಾಂಸಾರಿಕ ಸುಖ ಇಲ್ಲದಾಗುತ್ತದೆ ಎಂದು ತಿಳಿಯುವುದು ಮೂರ್ಖತನ.

ಮಗುವಿನ ಹಾಲುಹಲ್ಲು ಬಿದ್ದು ಹೋಗುತ್ತದೆ. ಅದಕ್ಕೆ ನಾವು ವ್ಯಥೆ ಪಡುವುದಿಲ್ಲ. ಏಕೆಂದರೆ, ಅದು ಬಿದ್ದು ಹೋದರೂ ಅದಕ್ಕಿಂತ ಗಟ್ಟಿಯಾದ ಮತ್ತೊಂದು ಹಲ್ಲು ಹುಟ್ಟುತ್ತದೆ. ಅದರಂತೆ ಸಾಂಸಾರಿಕ ಸುಖಕ್ಕಿಂತ ಮಿಗಿಲಾದ ಮೋಕ್ಷಸುಖ ಲಭಿಸುವಾಗ ಈ ಸುಖ ಇಲ್ಲದಾಗುತ್ತದೆ ಎಂದು ವ್ಯಥೆ ಪಡಬೇಕಾಗಿಲ್ಲ.



ಕಳ್ಳನೊಬ್ಬ ಚಿಕ್ಕ ಮಗುವಿನ ಕೊರಳಲ್ಲಿರುವ ಚಿನ್ನದ ಸರವನ್ನು ಲಪಟಾಯಿಸಲು ಮಗುವಿಗೆ ಮಿಠಾಯಿಯ ಆಸೆಯನ್ನು ತೋರಿಸುತ್ತಾನೆ. ಮಗು ಚಿನ್ನದ ಸರದ ಬೆಲೆಯನ್ನು ಅರಿಯದೆ ಚಿಕ್ಕ ಮಿಠಾಯಿಗಾಗಿ ಸರವನ್ನು ಕಳಚಿ ಕಳ್ಳನ ಕೈಗೆ ಕೊಡುತ್ತದೆ. ಅದರಂತೆ ನಮ್ಮ ಪಾಡಾದೀತು! ಅಲ್ಪ ಸುಖದ ಆಸೆಗಾಗಿ ಅನರ್ಘ್ಯವಾದ ಮೋಕ್ಷಸುಖವನ್ನು ಬಿಡುವುದು ಮಿಠಾಯಿಯ ಆಸೆಯಿಂದ ಚಿನ್ನದ ಸರವನ್ನು ಕಳೆದುಕೊಂಡಂತೆ!

**ಸ್ಥಿತಪ್ರಜ್ಞ :**

ಭಗವಂತನನ್ನು ಕಂಡ ಜ್ಞಾನಿ ಸ್ಥಿತಪ್ರಜ್ಞ. ಸ್ಥಿತಪ್ರಜ್ಞ ನಿರಾಯಾಸವಾಗಿ ತನ್ನ ಇಂದ್ರಿಯಗಳನ್ನು ನಿಯಂತ್ರಿಸಬಲ್ಲ. ಬೇಕೆಂದಾಗ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹರಿಸಲೂ, ಬೇಡವೆಂದಾಗ ವಿಷಯಗಳಿಂದ ಸೆಳೆಯಲೂ ಅವನು ಹೆಚ್ಚು ಪ್ರಯತ್ನಿಸಬೇಕಿಲ್ಲ. ಆಮೆ ತನ್ನ ಅವಯವಗಳನ್ನು ಒಳ-ಹೊರಗೆ ಅನಾಯಾಸವಾಗಿ ಸೆಳೆದು-ಚಾಚುವಂತೆ ಅವನೂ ಅನಾಯಾಸ ವಾಗಿ ಈ ಕೆಲಸವನ್ನು ಮಾಡಬಲ್ಲ. ಅವನು ತನ್ನ ಇಂದ್ರಿಯಗಳ ಮೇಲೆ ಅಂತಹ ಪ್ರಭುತ್ವವನ್ನು ಹೊಂದಿರುತ್ತಾನೆ.

ದೊಡ್ಡವರು ಅನಾಯಾಸವಾಗಿ ನಡೆಯುತ್ತಾರೆ. ಆದರೆ ಮಕ್ಕಳು ಅದನ್ನು ನೋಡಿ ತಾವೂ ನಡೆಯಲು ಕಲಿಯುತ್ತವೆ. ಕಲಿಯುವಾಗ ಏಳುತ್ತವೆ, ಬೀಳುತ್ತವೆ. ಅದರಂತೆ, ನಾವು ಪ್ರಯತ್ನದಿಂದ ಮಾಡುವ ಇಂದ್ರಿಯನಿಗ್ರಹವನ್ನು ಜ್ಞಾನಿಗಳು ಅನಾಯಾಸದಿಂದ ಮಾಡುತ್ತಾರೆ. ಬೇಕಾದಾಗ ವಿಷಯಗಳ ಕಡೆ ಇಂದ್ರಿಯಗಳನ್ನು ಹರಿಸುತ್ತಾರೆ, ಬೇಡವೆಂದಾಗ ಹತೋಟಿಯಲ್ಲಿ ಇಟ್ಟಿರುತ್ತಾರೆ. ನಾವು ಈ ವಿಷಯದಲ್ಲಿ ಎಡವುತ್ತೇವೆ. ಅಷ್ಟೇ ಅಲ್ಲ, ವಿಷಯವಸ್ತುಗಳಲ್ಲಿ ನೆಲೆಗೊಂಡ ಇಂದ್ರಿಯಗಳನ್ನು ಹಿಂತಿರುಗಿಸಲು ಅಸಮರ್ಥರಾಗುತ್ತೇವೆ.

ಇದು ಸ್ಥಿತಪ್ರಜ್ಞರಿಗೂ ನಮಗೂ ಇರುವ ಅಂತರ.

**ಹಾಲು-ಬೆಣ್ಣೆ :**

ನೀರಿನಲ್ಲಿ ಹಾಲನ್ನು ಹಾಕಿದರೆ ಮತ್ತೆ ತೆಗೆಯಲಾಗದು. ಅದು ನೀರಿನ ಜೊತೆ ಒಂದಾಗುತ್ತದೆ. ಆದರೆ ಹಾಲನ್ನು ಕಡೆದು ಬೆಣ್ಣೆ ತೆಗೆದು ನೀರಿನಲ್ಲಿ ಹಾಕಿದರೆ ಆ ಬೆಣ್ಣೆ ನೀರಿಗೆ ಅಂಟುವುದಿಲ್ಲ. ಅದನ್ನು ಸುಲಭವಾಗಿ ನೀರಿನಿಂದ ಮೇಲಕ್ಕೆ ತೆಗೆಯಬಹುದು.

ಮನಸ್ಸು ಹಾಲು. ಅದನ್ನು ವಿಷಯವಸ್ತುಗಳಲ್ಲಿ ಹರಿಯಗೊಟ್ಟರೆ ಮತ್ತೆ ಹಿಂದಕ್ಕೆ ತೆಗೆಯುವುದು ಕಷ್ಟ. ಅದನ್ನು ಬೆಣ್ಣೆಯನ್ನಾಗಿ ಮಾಡಬೇಕು. ಆಗ ವಿಷಯವಸ್ತುಗಳಿಗಿಂದ ಸುಲಭವಾಗಿ ಅದನ್ನು ಹಿಂದಕ್ಕೆ ಸೆಳೆದುಕೊಳ್ಳಬಹುದು.



**ಗಣಪನ ಮೇಲೆ ಇಲಿ :**

ಇಂದ್ರಿಯಗಳ ಪ್ರವಾಹ ಬಹಿರ್ಮುಖವಾದುದು. ಅದನ್ನು ಅಂತರ್ಮುಖಗೊಳಿಸಬೇಕು. ಅದು ಸುಲಭದ ಕೆಲಸವಲ್ಲ. ಪ್ರವಾಹದ ವಿರುದ್ಧ ಈಜುವ ಸಾಹಸ.

ಇಂದ್ರಿಯಗಳ ಮೇಲೆ ನಾವು ಪ್ರಭುತ್ವವನ್ನು ಸಂಪಾದಿಸಬೇಕು. ನಾವು ಹೇಳಿದಂತೆ ಅವು ನಡೆಯಬೇಕು. ಆದರೆ ನಾವು ಇಂದ್ರಿಯಗಳ ಹತೋಟಿಯನ್ನು ಕಳೆದುಕೊಂಡಿದ್ದೇವೆ. ಕುದುರೆಯ ಮೇಲೆ ನಾವು ಸವಾರಿ ಮಾಡುವ ಬದಲು ಕುದುರೆಯೇ ನಮ್ಮ ಮೇಲೆ ಸವಾರಿ ಮಾಡುತ್ತಿದೆ.

ಗಣಪತಿ ಇಲಿಯ ಮೇಲೆ ಕುಳಿತಿದ್ದಾನೆ. ಇಲಿ ಚಂಚಲವಾದ ಹಾಗೂ ಮುಚ್ಚುಮರೆಯ ಸ್ವಭಾವದ ಮನಸ್ಸಿನ ಸಂಕೇತ. ಹೀಗೆ ಮನಸ್ಸೆಂಬ ಇಲಿಯ ಮೇಲೆ ಅಂಕುಶ ಹಿಡಿದ ಗಣಪತಿ ಕುಳಿತಿರಬೇಕು. ಆದರೆ ನಮ್ಮಲ್ಲಿ ಇದು ತಿರುವು-ಮುರುವಾಗಿದೆ. ಗಣಪತಿಯ ಮೇಲೆ ಇಲಿ ಕೂತಂತಾಗಿದೆ. ನಮ್ಮ ಮೇಲೆ ಮನಸ್ಸು ಪ್ರಭುತ್ವವನ್ನು ಪಡೆದಿದೆ. ಹೀಗಾಗಬಾರದು.

**ಇಂದ್ರಿಯನಿಗ್ರಹ ಮಾಡುವ ಬಗೆ :**

ಇಂದ್ರಿಯಗಳು ನಮ್ಮ ಹತೋಟಿಯಲ್ಲಿ ನಿಲ್ಲಬೇಕಾದರೆ ಇಂದ್ರಿಯಗಳೆಂಬ ಹಾವುಗಳ ವಿಷದ ಹಲ್ಲನ್ನು ಕಿತ್ತು ಹಾಕಬೇಕು. ಹಲ್ಲು ಕಿತ್ತಿದ ಹಾವನ್ನು ಹಾವಾಡಿಗ ಯಥೇಚ್ಛವಾಗಿ



ಆಡಿಸುತ್ತಾನೆ. ಅದರಂತೆ ವಿಷವನ್ನು ಕಿತ್ತು ಹಾಕಿದರೆ ಇಂದ್ರಿಯಗಳೆಂಬ ಹಾವು ನಾವು ಹೇಳಿದಂತೆ ಕೇಳುತ್ತದೆ.

ರಾಗ-ದ್ವೇಷಗಳೇ ಇಂದ್ರಿಯಗಳ ವಿಷ. ವಿಷಯವಸ್ತುಗಳ ಬಗ್ಗೆ ಆಸಕ್ತಿ ಇದ್ದರೆ ಅವುಗಳ ಕಡೆಗೆ ಸೆಳೆತ ಹೆಚ್ಚುತ್ತದೆ. ದ್ವೇಷವಿದ್ದರೆ ಪ್ರತೀಕಾರಭಾವ ಮೂಡುತ್ತದೆ. ಆಗ ಇಂದ್ರಿಯಗಳು ನಮ್ಮ ಅಂಕೆಯಿಂದ ತಪ್ಪುತ್ತವೆ. ಆದ್ದರಿಂದ ರಾಗ-ದ್ವೇಷಗಳನ್ನು ತ್ಯಜಿಸಿ ಇಂದ್ರಿಯಗಳನ್ನು ಗೆಲ್ಲಬೇಕು.

ವಿಷಯವಸ್ತುಗಳಲ್ಲಿ ದೋಷವನ್ನು ಕಂಡು ದೇವರಲ್ಲಿ ಗುಣವನ್ನು ಗ್ರಹಿಸಿದಾಗ ವಿಷಯಗಳಲ್ಲಿ ಆಸಕ್ತಿ ಕಡಿಮೆಯಾಗಿ ದೇವರಲ್ಲಿ ಆಸಕ್ತಿ ಹೆಚ್ಚುತ್ತದೆ. ಹೀಗೆ ರಾಗವನ್ನು ಕಳೆದುಕೊಳ್ಳಲು ವಿಷಯಗಳಲ್ಲಿ ದೋಷಚಿಂತನೆ ಮಾಡಬೇಕು.

ಒಟ್ಟಿನಲ್ಲಿ, ಪ್ರಾಪಂಚಿಕ ಭೋಗ್ಯವಸ್ತುಗಳಲ್ಲಿ ದೋಷಚಿಂತನೆ ಮಾಡಿ ಅವುಗಳಲ್ಲಿ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳಬೇಕು. ಆಸಕ್ತಿ ಕಡಿಮೆಯಾದರೆ ಇಂದ್ರಿಯಗಳ ಸೆಳೆತದ ರಭಸ ಕಡಿಮೆಯಾಗುತ್ತದೆ. ಇದರಿಂದ ಇಂದ್ರಿಯಗಳ ಮೇಲೆ ನಮಗೆ ಪ್ರಭುತ್ವ ಸಿದ್ಧಿಸುತ್ತದೆ.

**ರಾವಣ-ಕುಂಭಕರ್ಣ-ವಿಭೀಷಣ :**

ಈ ಮೂವರು ಸಹೋದರರೂ ದೇವರನ್ನು ಕುರಿತು ತಪಸ್ಸು ಮಾಡಿದರು. ಕುಂಭಕರ್ಣನಿಗೆ ದೇವರು ಪ್ರತ್ಯಕ್ಷನಾದರೆ ಅವನು

ತನಗೆ ಅವಧ್ಯತ್ವವನ್ನು ಕೇಳುವ ಬದಲು ನಿದ್ರೆಯನ್ನು ಕೇಳಿ ಪಡೆದ. ರಾವಣ ತನಗೆ ಮರಣ ಬರಬಾರದೆಂದು ಉದ್ದೇಶಿಸಿ ದೇವತೆಗಳಿಂದಲೂ ಮರಣ ಬಾರದಂತಹ ವರ ಬೇಡಿದ. ವರವೇನೋ ಈಡೇರಿತು. ಆದರೆ ಅವನ ಉದ್ದೇಶ ಈಡೇರಲಿಲ್ಲ. ಮಾನವ ವೇಷದ ರಾಮನಿಂದ ಮರಣವಪ್ಪಿದ.

ವಿಭೀಷಣ ತಾನು ಚಿರಂಜೀವಿಯಾಗಬೇಕೆಂದು ಕೇಳಲಿಲ್ಲ. ವಿಷ್ಣುಭಕ್ತಿ-ಧರ್ಮನಿಷ್ಠೆಯನ್ನು ಬೇಡಿದ. ಇದರಿಂದ ಅವನು ಬಯಸದೇ ಇದ್ದರೂ ಚಿರಜೀವನ ಅವನ ಪಾಲಿಗೆ ಬಂತು.

ಹೀಗೆ ಧರ್ಮನಿಷ್ಠೆ-ದೈವಭಕ್ತಿ ಇದ್ದರೆ ನಾವು ಬಯಸದ ಭಾಗ್ಯಗಳು ನಮ್ಮ ಕಾಲಬುಡದಲ್ಲಿ ಬಂದು ಬೀಳುತ್ತವೆ.

**ಕರ್ಮ ಮಾಡದೇ ಇರಲಾಗದು :**

ಕರ್ಮ ಬಂಧಕ. ಹಿಂದಿನ ಪುಣ್ಯ-ಪಾಪಗಳನ್ನು ಅನುಭವಿಸುತ್ತಿರುವಾಗ ಅದರ ಜೊತೆ ಮತ್ತೆ ಪಾಪ-ಪುಣ್ಯಗಳು ಹುಟ್ಟುತ್ತವೆ. ಹೀಗೆ ಕರ್ಮ ರಕ್ತಬೀಜಾಸುರನಂತೆ. ದುರ್ಗಾದೇವಿ ಒಬ್ಬ ರಕ್ತ ಬೀಜಾಸುರನನ್ನು ಕೊಂದರೆ ಅವನ ಒಂದು ತೊಟ್ಟು ರಕ್ತದಿಂದ ನೂರಾರು ರಕ್ಕಸರು ಹುಟ್ಟಿಬಂದರು. ಅವರನ್ನು ಕೊಂದರೆ ಮತ್ತೆ ಸಾವಿರಾರು ರಾಕ್ಷಸರು. ಹೀಗೆ ಒಂದು ಕರ್ಮ ಮಾಡಿದಾಗ ಅದರ ಜೊತೆಯಲ್ಲಿ ಹತ್ತಾರು ಪಾಪಗಳ ನಂಟು. ಅದನ್ನು ಅನುಭವಿಸುತ್ತಿರುವಾಗ ಮತ್ತೆ ನೂರಾರು ಪಾಪಗಳು.



ಹೀಗೆ ಕರ್ಮಾಚರಣೆಯಿಂದ ಈ ಕರ್ಮದ ನಂಟನ್ನು ಕಳೆದು ಕೊಳ್ಳಲು ಸಾಧ್ಯವೇ ಇಲ್ಲ. ಅದು ಅಪಥ್ಯದ ಜೊತೆ ಔಷಧಸೇವನೆ ಮಾಡಿದಂತೆ. ಔಷಧಸೇವನೆಯೂ ಮುಗಿಯುವುದಿಲ್ಲ. ರೋಗವೂ ಗುಣವಾಗುವುದಿಲ್ಲ. ಆದ್ದರಿಂದ ಯಾವ ಕರ್ಮ ವನ್ನೂ ಮಾಡದೇ ಕೈಕಟ್ಟಿ ಕುಳಿತಿರುವುದೇ ಲೇಸು.ಇದು ಅರ್ಜುನನ ಪ್ರಶ್ನೆ.

ಇದಕ್ಕೆ ಶ್ರೀಕೃಷ್ಣ ಹೇಳಿದ ಉತ್ತರ - ನಾವು ಆಹಾರವನ್ನು ಸೇವನೆ ಮಾಡಿದರೆ ವಿವಿಧ ರೋಗಗಳು ಬರುತ್ತವೆ. ಅದಕ್ಕಾಗಿ ಆಹಾರವನ್ನೇ ತ್ಯಜಿಸಿ ಉಪವಾಸ ಮಾಡಿದರೆ ಹೇಗೆ? ಕೆಟ್ಟ ಆಹಾರವನ್ನು ಸೇವಿಸದರೆ ರೋಗ ಬರುತ್ತದೆ. ಅದನ್ನು ಬಿಟ್ಟು ಸಾತ್ವಿಕ ಆಹಾರವನ್ನು ಸೇವಿಸಬೇಕು. ಹೊರತು, ರೋಗದ ಭೀತಿಯಿಂದ ಆಹಾರವನ್ನೇ ಬಿಟ್ಟು ಉಪವಾಸ ಕೂಡುವುದಲ್ಲ.

ಅದರಂತೆ, ಸಕಾಮ ಕರ್ಮಗಳನ್ನು ತ್ಯಜಿಸಬೇಕು. ನಿಷ್ಕಾಮಕರ್ಮಗಳನ್ನು ಮಾಡಬೇಕು. ಹೊರತು, ಪಾಪದ ಭೀತಿಯಿಂದ ಕರ್ಮದ ಗೊಡವೆಯನ್ನೇ ಬಿಡಬಾರದು. ಅದು ಸಾಧ್ಯವೂ ಇಲ್ಲ. ಕೆಲಸ ಮಾಡದೆ, ನಿಷ್ಕ್ರಿಯನಾಗಿದ್ದರೆ ಜೀವನವಾದರೂ ಹೇಗೆ ಸಾಗೀತು?

ಅಷ್ಟೇ ಅಲ್ಲ, ಕರ್ತವ್ಯ ವಿಮುಖನಾಗಿ ಕೈಕಟ್ಟಿ ಕುಳಿತರೂ ಪಾಪದ ನಂಟು ತಪ್ಪಿದ್ದಲ್ಲ. ಕೈಕಾಲುಗಳು ಸುಮ್ಮನೆ ಕೂತರೂ ಮನಸ್ಸು ಸುಮ್ಮನಿರಬೇಕಲ್ಲ?



ಆದ್ದರಿಂದ ಸರ್ವಾತ್ಮನಾ ಕರ್ಮವನ್ನು ಬಿಟ್ಟಿರುವುದು ಅವ್ಯಾವಹಾರಿಕ. ಅದಕ್ಕಾಗಿ ಕರ್ಮದಲ್ಲಿ ತೊಡಗುತ್ತಲೇ ಪಾಪ ಅಂಟದಂತೆ ನೋಡಿಕೊಳ್ಳಬೇಕು. ಸ್ವಾರ್ಥದಿಂದ ಮಾಡಿದ ಕರ್ಮ ಪುಣ್ಯ-ಪಾಪಗಳಿಗೆ ಕಾರಣವಾಗಿ ಬಂಧಕವಾಗುತ್ತದೆ. ನಿಃಸ್ವಾರ್ಥದಿಂದ ಮಾಡಿದ ಕರ್ಮ ಬಂಧನದ ಬಿಡುಗಡೆಗೆ ಕಾರಣವಾಗುತ್ತದೆ.

ಕರ್ಮ ಬೀಗದ ಕೈ ಇದ್ದಂತೆ. ಬೀಗದ ಕೈಯಿಂದ ಪೆಟ್ಟಿಗೆಯನ್ನು ತೆರೆಯಲೂ ಬಹುದು, ಮುಚ್ಚಲೂ ಬಹುದು. ಅದರಂತೆ ಕರ್ಮದಿಂದ ಬಂಧನವೂ ಆಗಬಹುದು; ಮೋಕ್ಷವೂ ಸಿಗಬಹುದು.

ನಾವು ಪ್ರತಿಕ್ಷಣವೂ ದೇವತೆಗಳಿಂದ ಉಪಕಾರವನ್ನು ಪಡೆಯುತ್ತಿರುತ್ತೇವೆ. ಅದಕ್ಕೆ ನಾವು ನೀಡಬೇಕಾದ ಪ್ರತಿಫಲ- ಕರ್ತವ್ಯನಿರ್ವಹಣೆ. ಕರ್ತವ್ಯವನ್ನು ನಿರ್ವಹಿಸಿದರೆ ಮಾತ್ರ ನಮಗೆ ಈ ಪ್ರಪಂಚದಲ್ಲಿ ಬಾಳಲು ಅಧಿಕಾರ. 'ಕರ್ತವ್ಯವನ್ನು ನಿರ್ವಹಿಸದೆ ಉಣ್ಣುವವನು ಅನ್ನವನ್ನಲ್ಲ, ಪಾಪವನ್ನು ತಿನ್ನುತ್ತಾನೆ' ಎಂದಿದ್ದಾನೆ ಶ್ರೀಕೃಷ್ಣ.

**ಆದ್ದರಿಂದ ಕರ್ತವ್ಯವನ್ನು ನಿರ್ವಹಿಸಿದವನಿಗೆ ಮಾತ್ರ ಈ ಪ್ರಪಂಚದಲ್ಲಿ ಬದುಕಲು ಅಧಿಕಾರ.**

**ಯಜ್ಞವೆಂದರೆ :**

ಅಗ್ನಿಯಲ್ಲಿ ತುಪ್ಪವನ್ನು ಹಾಕುವುದಷ್ಟೇ ಯಜ್ಞವಲ್ಲ. ಪ್ರೇಮ ಮತ್ತು ತ್ಯಾಗಗಳ ಸಮನ್ವಯಯವೇ ಯಜ್ಞ. ದೇವರ ಮೇಲಿನ ಪ್ರೇಮದಿಂದ, ಭಕ್ತಿಯಿಂದ ದೇವರ ಪ್ರೀತಿಗಾಗಿ ಮಾಡುವ ತ್ಯಾಗ ಯಜ್ಞ. ಈ ದೃಷ್ಟಿಯಲ್ಲಿ ಸಾಮಾಜಿಕ, ಪ್ರಾಕೃತಿಕ ಸುವ್ಯವಸ್ಥೆಗಾಗಿ ನಾವು ಮಾಡುವ ಕರ್ತವ್ಯಗಳೆಲ್ಲವೂ ಯಜ್ಞವೆನಿಸುತ್ತವೆ. ಇಂತಹ ಯಜ್ಞವನ್ನು ನೆರವೇರಿಸದವರು ಲೋಕಹಂತಕರು.

**ಕರ್ತವ್ಯ ನೆರವೇರಿಸುವಾಗ ಇರಬೇಕಾದ ಅನುಸಂಧಾನ :**

ಒಮ್ಮೆ ದೇವತೆಗಳು ದೈತ್ಯರನ್ನು ಸೋಲಿಸಿದರು. ಆ ವಿಜಯವನ್ನು ತಾವೇ ಸಾಧಿಸಿದ್ದು ಎಂದು ತಿಳಿದು ಸಂಭ್ರಮದಿಂದ ವಿಜಯೋತ್ಸವವನ್ನು ಆಚರಿಸಿದರು. ತಮ್ಮೊಳಗಿದ್ದು ಈ ಜಯವನ್ನು ತಂದು ಕೊಟ್ಟವನು ಭಗವಂತ ಎಂಬ ಅರಿವು ಅವರಿಗೆ ಇರಲಿಲ್ಲ. ದೇವತೆಗಳ ಈ ಅಚಾತುರ್ಯವನ್ನು ತಿದ್ದಲು ಭಗವಂತ ಒಂದು 'ಯಕ್ಷ' (ಭೂತ)ದ ರೂಪದಲ್ಲಿ ಕಾಣಿಸಿಕೊಂಡ. ಅದ್ಭುತವಾದ ಈ ಯಕ್ಷನನ್ನು ಕಂಡು ಅದರ ಬಗ್ಗೆ ವಿಚಾರಿಸಿಕೊಂಡು ಬರುವಂತೆ ದೇವತೆಗಳು ಅಗ್ನಿಯನ್ನು ಕಳುಹಿಸಿದರು. ಅಗ್ನಿ ಆ ಯಕ್ಷನ ಬಳಿ ಹೋದ.

'ಯಾರು ನೀನು' ಯಕ್ಷ ಕೇಳಿದ.

'ನಾನು ಅಗ್ನಿ' ಎಂದ ಅಗ್ನಿದೇವ.



'ಏನು ನಿನ್ನ ಹೆಗ್ಗಳಿಕೆ?'

'ಈ ಜಗತ್ತನ್ನೆಲ್ಲ ಸುಡಬಲ್ಲೆ'

'ಹಾಗಾದರೆ ಈ ಹುಲ್ಲುಕಡ್ಡಿಯನ್ನು ಸುಡು ನೋಡೋಣ'.

ಅಗ್ನಿ ತನ್ನ ಸಕಲ ಶಕ್ತಿಯನ್ನು ಉಪಯೋಗಿಸಿದರೂ ಆ ಹುಲ್ಲನ್ನು ಸುಡಲಾಗಲಿಲ್ಲ.

ಹೀಗೆ ದೇವರ ಹೊರತಾಗಿ ನಮ್ಮಿಂದ ಯಾವ ಕಾರ್ಯವೂ ನಡೆಯದು. ಎಷ್ಟು ದೊಡ್ಡ ಯಂತ್ರವಾದರೂ ವಿದ್ಯುತ್ತು ಇಲ್ಲದಿದ್ದರೆ ಸ್ತಬ್ಧ. ಯಂತ್ರಗಳಿಗೆ ವಿದ್ಯುತ್ತಿನಂತೆ ನಮ್ಮೆಲ್ಲರಿಗೂ ದೇವರೆ ಶಕ್ತಿಯೇ ನೆಲೆ. ಈ ಸತ್ಯವನ್ನು ಜ್ಞಾನಿಗಳು ಅರಿತಿರುತ್ತಾರೆ. ಹೀಗೆ ಅರಿತು ಮಾಡುವುದರಿಂದ ಅವರು ಮಾಡುವ ಕರ್ತವ್ಯಗಳೇ ನಿಜವಾದ 'ಕರ್ಮ' ಎನಿಸುತ್ತದೆ.

***'ನಾಹಂ ಕರ್ತಾ ಹರಿಃ ಕರ್ತಾ'***

**ಮಾಡಿ- ಮಾಡಿಸಿದವ :**

ಶ್ರೀಕೃಷ್ಣ ಈ ಜಗದೊಡೆಯ. ಅವನು ಯಾರನ್ನೂ ಮೆಚ್ಚಿಸಬೇಕಾಗಿಲ್ಲ. ಆದರೂ ಅವನು ಬೆಳಿಗ್ಗೆ ಎದ್ದು ಸೂರ್ಯಾರ್ಘ್ಯ ನೀಡಿ, ದೇವರ ಧ್ಯಾನ ಮಾಡುತ್ತಿದ್ದ.

ಏಕೆ?



ತಾನು ಮಾಡದಿದ್ದರೆ ತನ್ನನ್ನು ಆದರ್ಶವ್ನನಾಗಿಟ್ಟುಕೊಂಡು ಜನರೂ ತಮ್ಮ ಕರ್ತವ್ಯಗಳನ್ನು ಬಿಡುತ್ತಾರೆ. ಅದರಿಂದ ಅವರಿಗೆ ಅನರ್ಥವಾಗುವುದು. ಹೀಗೆ 'ಲೋಕಸಂಗ್ರಹ'ಕ್ಕಾಗಿ ಶ್ರೀಕೃಷ್ಣನು ಧಾರ್ಮಿಕ ಕ್ರಿಯೆಗಳನ್ನು ಮಾಡುತ್ತಿದ್ದ. ಆದ್ದರಿಂದ ನಾವೂ ನಮ್ಮ ಕರ್ತವ್ಯವನ್ನು ಪ್ರತಿಫಲದ ಆಸೆಯನ್ನು ಬಿಟ್ಟು ಮಾಡಬೇಕೆಂದು ಶ್ರೀಕೃಷ್ಣನ ಆದೇಶ.

***'ತಸ್ಮಾದ್ ಅಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ'***

**ನಮ್ಮ ಕರ್ತವ್ಯವೇ ನಮಗೆ ಮುಖ್ಯ :**

ನಾವು ನಮಗೆ ಬೇಕಾದ ಪತ್ನಿಯನ್ನು ಆರಿಸಿಕೊಳ್ಳಬಹುದು; ಆದರೆ ತಾಯಿಯನ್ನು ಆರಿಸಿಕೊಳ್ಳುವಂತಿಲ್ಲ. ಹುಟ್ಟುವಾಗಲೇ ನಮ್ಮ ತಾಯಿ ನಮಗೆ ಸಿದ್ಧವಾಗಿರುತ್ತಾಳೆ. 'ನನ್ನ ತಾಯಿ ಚೆನ್ನಾಗಿಲ್ಲ, ಬೇರೆ ತಾಯಿಯನ್ನು ಆರಿಸಿಕೊಳ್ಳುತ್ತೇನೆ' ಎಂದು ಯಾರೂ ಹೇಳಲಾರರು.

ಅದರಂತೆ, ನಮಗೆಲ್ಲರಿಗೂ ಪ್ರತ್ಯೇಕವಾದ ಕರ್ತವ್ಯಗಳು ಸಿದ್ಧವಾಗಿರುತ್ತವೆ. ಅದನ್ನು ಶ್ರದ್ಧೆಯಿಂದ ನಿರ್ವಹಿಸುವುದೇ ನಮ್ಮ ಧರ್ಮ. ಮತ್ತೊಬ್ಬರು ಮಾಡುತ್ತಿರುವ ಕೆಲಸ ನಮಗಿಂತಲೂ ಚೆನ್ನಾಗಿದೆ ಎಂದು ತಿಳಿದು ನಮ್ಮ ಕರ್ತವ್ಯವನ್ನು ಬಿಟ್ಟು ಆ ಕೆಲಸಕ್ಕೆ ಹಾರಬಾರದು. ಅದರಿಂದ ನಮಗೆ ಶ್ರೇಯಸ್ಸಾಗಲಾರದು.

***'ಸ್ವಧರ್ಮೇ ನಿಧನಂ ಶ್ರೇಯಃ'***

**ನುಡಿದಂತೆ – ನಡೆದ :**

ಅರ್ಜುನ, 'ಯುದ್ಧ ಬೇಡ, ನಾನು ಕಾಡಿನಲ್ಲಿ ತಪಸ್ಸು ಮಾಡುತ್ತೇನೆ' ಎಂದಾಗ ಶ್ರೀಕೃಷ್ಣ ಅವನನ್ನು ತಡೆದು 'ಕ್ಷತ್ರಿಯ ವೃತ್ತಿಯಿಂದಲೇ ನಿನಗೆ ಶ್ರೇಯಸ್ಸು' ಎಂದು ಉಪದೇಶಿಸಿದ. ಆದರೆ ಶ್ರೀಕೃಷ್ಣನೇ ಆದ ಶ್ರೀರಾಮ ಇದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾನೆ–

ಭರತ ರಾಮನಿದ್ದ ಕಾಡಿಗೆ ಬಂದು 'ನೀನು ವನವಾಸ ಮಾಡಬಾರದು. ನೀನು ಕ್ಷತ್ರಿಯ. ಕ್ಷತ್ರಿಯ ಧರ್ಮವೆಲ್ಲಿ, ಈ ಋಷಿವೃತ್ತಿ ಎಲ್ಲಿ? ಆದ್ದರಿಂದ ಅಯೋಧ್ಯೆಗೆ ಬಂದು ನಿನ್ನ ಕರ್ತವ್ಯವಾದ ರಾಜ್ಯಭಾರವನ್ನು ನಡೆಸುವುದು ನ್ಯಾಯ' ಎಂದು ಬೇಡಿಕೊಂಡ. ಆದರೆ, ರಾಮ ಹಾಗೆ ಮಾಡಲಿಲ್ಲ. ಕಾಡಿನಲ್ಲೇ ಉಳಿದ.

ಇದು ಸರಿಯೇ? ಶ್ರೀಕೃಷ್ಣ ಅರ್ಜುನನಿಗೆ ಹೇಳಿದಂತೆ ಶ್ರೀರಾಮ ರಾಜ್ಯಪರಿಪಾಲನೆಯನ್ನೇ ಮಾಡಬೇಕಿತ್ತಲ್ಲವೇ?

ಇದಕ್ಕೆ ಶ್ರೀರಾಮನ ಉತ್ತರ ಹೀಗಿದೆ– 'ಕ್ಷತ್ರಿಯ ವೃತ್ತಿಯನ್ನು ಪಾಲಿಸಬೇಕಾದರೆ ರಾಜ್ಯದ ಸಿಂಹಾಸನವೇ ಬೇಕಾಗಿಲ್ಲ. ಇಲ್ಲಿದ್ದೂ ನಾನು ಆ ಕೆಲಸವನ್ನು ಪೂರೈಸಬಹುದು. ಅರಣ್ಯದಲ್ಲಿ ತಪಸ್ಸು ಮಾಡುತ್ತಿರುವ ಋಷಿ–ಮುನಿಗಳಿಗೆ ಅನೇಕ ದುಷ್ಟ ರಾಕ್ಷಸರು ಹಿಂಸೆ ಕೊಡುತ್ತಿದ್ದಾರೆ. ಅವರನ್ನು ಸಂಹರಿಸಿ ನಾನು ಪ್ರಜಾ ರಕ್ಷಣೆಯ ಕಾರ್ಯವನ್ನು ಇಲ್ಲಿದ್ದೇ ನಡೆಸುತ್ತೇನೆ'.



ಆದ್ದರಿಂದ, ನಾವು ಕರ್ತವ್ಯವನ್ನು ಪೂರೈಸಬೇಕಾದರೆ, ಅಧಿಕಾರ, ಪದವಿಯೇ ಬೇಕಾಗಿಲ್ಲ. ಎಲ್ಲಿದ್ದರೂ ಮನಸ್ಸಿದ್ದರೆ ಲೋಕಹಿತಕಾರ್ಯವನ್ನು ನಡೆಸಬಹುದು.

**ತಿಳಿದೂ ತಪ್ಪನ್ನೇಕೆ ಮಾಡುತ್ತೇವೆ :**

'ಇದು ತಪ್ಪು' 'ಹೀಗೆ ಮಾಡಬಾರದು' ಎಂದು ತಿಳಿದೂ ಕೆಲವೊಮ್ಮೆ ನಾವು ತಪ್ಪುಗಳನ್ನು ನಡೆಸುತ್ತೇವೆ. ಅದಕ್ಕೇನು ಕಾರಣ? ಎಂದು ಅರ್ಜುನನ ಪ್ರಶ್ನೆ.

**'ಕಾಮ ಏಷಃ ಕ್ರೋಧ ಏಷಃ'**

ಅದಕ್ಕೆ ಕಾಮ ಮತ್ತು ಕ್ರೋಧಗಳು ಕಾರಣ ಎಂದು ಶ್ರೀಕೃಷ್ಣನ ಸಮಾಧಾನ. ಮನುಷ್ಯ ಈ ರಾಗ–ದ್ವೇಷಗಳ ಒತ್ತಡಕ್ಕೆ ಒಳಗಾಗಿ ಗೊತ್ತಿದ್ದೂ ತಪ್ಪು ಮಾಡುತ್ತಾನೆ. ಕಾಮ ಎಂದರೆ ದುರಾಸೆ. ಆ ದುರಾಸೆಗೆ ತಡೆ ಬಂದಾಗ ಸಿಟ್ಟು ಬರುತ್ತದೆ. ಆಗ ಗೊತ್ತಿದ್ದೂ ತಪ್ಪು ಮಾಡಲು ನಾವು ಸಿದ್ಧರಾಗುತ್ತೇವೆ.

ಕಾಮ–ದುರಾಸೆ ನಮ್ಮಲ್ಲಿರುವ ದೊಡ್ಡ ದುರ್ಗುಣ. ಅದನ್ನು ಶ್ರೀಕೃಷ್ಣ 'ಮಹಾಶನಃ' ಎಂದು ಕರೆದಿದ್ದಾನೆ. ಎಷ್ಟು ತಣಿಸಿದರೂ ಅದು ಮತ್ತೆ ಬೇಕೆನ್ನುತ್ತದೆ. ಅದನ್ನು ತಣಿಸುವುದಕ್ಕಾಗಿ ನಾವು ಜೀವನದಲ್ಲಿ ಅನೇಕ ಅನ್ಯಾಯ–ಅಕೃತ್ಯಗಳನ್ನು ಮಾಡುತ್ತೇವೆ–

***ಈಹಂತೇ ಕಾಮಭೋಗಾರ್ಥಮ್***
***ಅನ್ಯಾಯೇನ ಅರ್ಥಸಂಚಯಮ್ ॥***



ಆದ್ದರಿಂದ ರಾಗದ್ವೇಷಗಳೇ ಎಲ್ಲ ತಪ್ಪುಗಳಿಗೂ ಮೂಲ.

**ದುರಾಸೆಯ ಆಕ್ರಮಣ ವಿಧಾನ :**

ಬೆಂಕಿಗೆ ಹೊಗೆಯಂತೆ, ಸೂರ್ಯನಿಗೆ ಮೋಡದಂತೆ ಈ ದುರಾಸೆ ದೇವರಿಗೆ ಅಡ್ಡ ಬರುತ್ತದೆ. ಮೋಡ ಕವಿದರೆ ಸೂರ್ಯನಿಗೇನೂ ತೊಂದರೆ ಇಲ್ಲ. ಆದರೆ, ನಮಗೆ ಸೂರ್ಯ ಕಾಣುವುದಿಲ್ಲ. ಹೀಗೆ ದುರಾಸೆಯು ನಮಗೆ ದೇವರ ಜ್ಞಾನ ಬರದಂತೆ ತಡೆಯುತ್ತದೆ.

ಕನ್ನಡಿಗೆ ಮುಚ್ಚಿದ ಕೊಳೆಯಂತೆ ದುರಾಸೆ ನಮ್ಮ ಅಂತಃಕರಣದ ಮೇಲೆ ಧಾಳಿ ಇಡುತ್ತದೆ. ಕೊಳೆ ಮುಚ್ಚಿದ ಕನ್ನಡಿಯಲ್ಲಿ ನಮ್ಮ ಪ್ರತಿಬಿಂಬ ಕಾಣುವುದಿಲ್ಲ. ಅದರಂತೆ ದುರಾಸೆ ತುಂಬಿದ ಅಂತಃಕರಣದಲ್ಲಿ ದೇವರ ಜ್ಞಾನ ಮೂಡುವುದಿಲ್ಲ.

ಗರ್ಭಚೀಲವು ಶಿಶುವನ್ನು ಕಟ್ಟಿಹಾಕುವಂತೆ ದುರಾಸೆ ನಮ್ಮನ್ನು– ಆತ್ಮನನ್ನು ಬಂಧಿಯನ್ನಾಗಿ ಮಾಡುತ್ತದೆ. ತಾಯಿಯ ಹೊಟ್ಟೆಯೊಳಗೆ ಮಗು ಗರ್ಭಚೀಲದೊಳಗೆ ಸಿಕ್ಕಿ ಸ್ವತಂತ್ರವಾಗಿ ಕೈಕಾಲುಗಳನ್ನು ಅಲ್ಲಾಡಿಸಲೂ ಅಸ್ವತಂತ್ರವಾಗಿರುತ್ತದೆ. ಇದರಂತೆ ಆತ್ಮನನ್ನು ದುರಾಸೆಯು ಮುತ್ತುತ್ತದೆ.

ಹೀಗೆ ದುರಾಸೆ ದೇವರು, ದೇವರನ್ನು ಕಾಣುವ ಅಂತಃಕರಣ, ಕಾಣಬೇಕಾದ ಜೀವ ಈ ಮೂರನ್ನೂ ಪ್ರತಿಬಂಧಿಸಿ ನಮ್ಮ ಮೇಲೆ ಆಕ್ರಮಣ ನಡೆಸುತ್ತದೆ.

**ದುರಾಸೆಯನ್ನು ಗೆಲ್ಲುವ ವಿಧಾನ :**

ಶತ್ರುಗಳ ಆಕ್ರಮಣವನ್ನು ಪರಿಣಾಮಕಾರಿಯಾಗಿ ತಡೆಗಟ್ಟಬೇಕಾದರೆ ಶತ್ರುಗಳ ತಾಣಕ್ಕೆ ಮುತ್ತಿಗೆ ಹಾಕಬೇಕು. ದುರಾಸೆಯೆಂಬ ಶತ್ರುವಿನ ನೆಲೆ ಮನಸ್ಸೇ ಮೊದಲಾದ ಇಂದ್ರಿಯಗಳು. ಅಲ್ಲಿ ನಿಂತು ಅದು ಕ್ಷಿಪಣಿ ಪ್ರಯೋಗ ನಡೆಸುತ್ತದೆ. ಅದಕ್ಕಾಗಿ, ಅಂತಹ ಇಂದ್ರಿಯಗಳನ್ನು ಹತೋಟಿಯಲ್ಲಿಡಬೇಕು. ಇದಕ್ಕೆ ಎರಡು ವಿಧಾನ- ಒಂದು ನಮ್ಮ ಪ್ರಯತ್ನ, ಮತ್ತೊಂದು ಆಯಾಯ ಇಂದ್ರಿಯಗಳನ್ನು ನಿಯಂತ್ರಿಸುವ ದೇವತೆಗಳ ಅನುಗ್ರಹ. ತಾರಮ್ಯಕ್ಕನುಗುಣವಾಗಿ ಇಂದ್ರಿಯಾಭಿಮಾನಿ ದೇವತೆಗಳನ್ನು ತಿಳಿದು, ಆರಾಧಿಸಿ ಅವರ ಅನುಗ್ರಹದಿಂದ ಯತ್ನಪೂರ್ವಕವಾಗಿ ಇಂದ್ರಿಯಗಳನ್ನು ಗೆಲ್ಲಬೇಕು. ಆಗ ಕಾಮ-ಕ್ರೋಧಗಳೆಂಬ ಶತ್ರುಗಳು ತಮ್ಮ ನೆಲೆಯನ್ನು ಕಳೆದುಕೊಂಡು ನಾಶವಾಗುತ್ತವೆ.

**ತಸ್ಮಾತ್ ತ್ವಂ ಇಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ।**
**ಪಾಪ್ಮಾನಂ ಪ್ರಜಹಿ ಹ್ಯೇನಂ ಕಾಮರೂಪಂ ದುರಾಸದಮ್ ॥**

**ಸ್ವಾತಂತ್ರ್ಯವೆಂದರೇನು :**

***(ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯಂದು)***

ಮನಸ್ಸಿಗೆ ತೋಚಿದಂತೆ ವರ್ತಿಸುವುದು ಸ್ವಾತಂತ್ರ್ಯವಲ್ಲ. ಅದು ಇಂದ್ರಿಯಗಳ ಗುಲಾಮಗಿರಿ. ಮನಸ್ಸು ಹೇಳಿದಂತೆ ನಾವು



ನಡೆದರೆ ನಾವು ಅದರ ದಾಸರಾದಂತೆ. ನಾವು ಹೇಳಿದಂತೆ ಮನಸ್ಸು ಕೇಳಬೇಕು. ಈ ದೇಹವೆಂಬ ರಥದಲ್ಲಿ ನಾವು ರಥಿಕರಾದರೆ ಬುದ್ಧಿ-ವಿವೇಕವೇ ಸಾರಥಿ. ಮನಸ್ಸು ಒಂದು ಕಡಿವಾಣ ಮಾತ್ರ. ಬುದ್ಧಿಯ ನಿಯಂತ್ರಣದಲ್ಲಿ ಮನಸ್ಸೆಂಬ ಕಡಿವಾಣ ಇದ್ದರೆ ಮಾತ್ರ ನಮ್ಮ ರಥಯಾತ್ರೆ ಸುಗಮವಾದೀತು.

ಆದ್ದರಿಂದ ಶಿಸ್ತು-ನಿಯಮಗಳಿಗೆ ಬದ್ಧರಾಗಿ ನಡೆಯುವುದೇ ಸ್ವಾತಂತ್ರ್ಯ. ಸ್ವಾತಂತ್ರ್ಯವನ್ನು ಎಂದೂ ಮನಸ್ಸಿಗೆ ನೀಡಬಾರದು. ಆತ್ಮನಿಗೆ ನಿಡಬೇಕು. ಮನಸ್ಸಿನ ಗುಲಾಮಗಿರಿಯನ್ನು ಕಿತ್ತೊಗೆದು ಆತ್ಮನ ಸ್ವಾತಂತ್ರ್ಯದ ಘೋಷಣೆಯೇ ಇಂದಿನ ಮುಖ್ಯ ಕರ್ತವ್ಯ.

**ಒಂದು ಜನ್ಮ - ಒಂದು ದಿನ :**

ನಮಗೆ ಅನೇಕ ವೇಳೆ ಅನಿಸುವುದಿದೆ- 'ನಾವು ಎಷ್ಟು ಒಳ್ಳೆಯವರಾದರೂ ಕಷ್ಟ ತಪ್ಪಿದ್ದಲ್ಲ. ನಮ್ಮ ಮುಂದೆಯೇ ಅನೇಕ ಮಂದಿ ಅನೀತಿ-ಅಕೃತ್ಯ- ಅವ್ಯವಹಾರಗಳನ್ನು ನಡೆಸಿ ಸುಖವಾಗಿ ಬಾಳುತ್ತಿದ್ದಾರೆ. ದೇವರು ಹೀಗೇಕೆ ಪಕ್ಷಪಾತ ಮಾಡುತ್ತಾನೆ' ಎಂದು.

ಆದರೆ, ನಾವು ಮಾಡಿದ ಒಳ್ಳೆಯ ಕೆಲಸ ಈ ಜನ್ಮದಲ್ಲೇ ಫಲ ನೀಡಬೇಕಿಲ್ಲ. ಈ ಜೀವನ ಪ್ರವಾಹದಲ್ಲಿ ಒಂದು ಜನ್ಮ ಒಂದು ದಿನವಿದ್ದಂತೆ. ಒಂದುದಿನದಲ್ಲಿ ಮಾಡಿದ ಸತ್ಕರ್ಮ ಅದೇ ದಿನದಲ್ಲಿ ಫಲ ನೀಡಬೇಕೆಂದರೆ ಹೇಗಾಗುತ್ತದೆ? ಔಷಧ ಸೇವಿಸಿದ



ಕೂಡಲೇ ರೋಗ ಪರಿಹಾರವಾಗುತ್ತದೆಯೆ? ಸ್ವಲ್ಪ ಕಾಯಬೇಕು.

***'ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತಿ'***

'ಒಳ್ಳೆಯದನ್ನು ಮಾಡಿದವನಿಗೆಂದೂ ಕೆಟ್ಟದಾಗುವುದಿಲ್ಲ.' ಇದು ಶ್ರೀಕೃಷ್ಣ ನೀಡಿದ ಭರವಸೆ.

**ದೇವರಿಗೆ ನಿವೇದಿಸುವ ಭಕ್ಷ್ಯ :**

ಬರೇ ಹಿಟ್ಟು ಕಸ. ಅದಕ್ಕೆ ಸಕ್ಕರೆ-ತುಪ್ಪಗಳನ್ನು ಬೆರೆಸಿದರೆ ಅದೇ ಒಂದು ಭಕ್ಷ್ಯ. ಅದರಂತೆ ನಮ್ಮ ದೈನಂದಿನ ಕರ್ತವ್ಯಗಳು ಹಿಟ್ಟಿನಂತೆ. ಅದಕ್ಕೆ ಜ್ಞಾನ ಮತ್ತು ಪ್ರೇಮಗಳನ್ನು ಬೆರೆಸಬೇಕು. ಯಾವುದೇ ಕೆಲಸವನ್ನು ನಾನೇ ಮಾಡುತ್ತೇನೆಂದು ತಿಳಿಯದೆ, ದೇವರು ಈ ಕರ್ತವ್ಯವನ್ನು ಮಾಡಿಸುತ್ತಿದ್ದಾನೆಂದು ತಿಳಿಯಬೇಕು. ಹೀಗೆ ತಿಳಿದು ದೇವರ ಮೇಲಿನ ಪ್ರೇಮದಿಂದ ನಮ್ಮ ಕರ್ತವ್ಯವನ್ನು ನೆರವೇರಿಸಬೇಕು. ಆಗ ನಾವು ಮಾಡಿದ ಸತ್ಕಾರ್ಯಗಳೆಲ್ಲವೂ ದೇವರಿಗೆ ಪ್ರಿಯವಾದ ಭಕ್ಷ್ಯವಾಗುತ್ತದೆ. ಇದು ಭಗವದ್ಗೀತೆಯ ಸಾರ. ಇದನ್ನೇ ಆಚಾರ್ಯರು ಗೀತಾತಾತ್ಪರ್ಯದಲ್ಲಿ ಹೀಗೆ ಹೇಳಿದ್ದಾರೆ-

***'ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋ ಧರ್ಮಃ'***

ಆಚಾರ್ಯರ ಸಂದೇಶದಲ್ಲಿ 'ಸ್ವವಿಹಿತವೃತ್ತ್ಯಾ' ಎಂಬ

ಪದವನ್ನು ಗಮನಿಸಬೇಕು. ನಮಗೆ ವಿಹಿತವಾದ ಸತ್ಕರ್ಮಗಳನ್ನಷ್ಟೇ ಪ್ರೇಮ-ಜ್ಞಾನಗಳೊಂದಿಗೆ ನೆರವೇರಿಸಬೇಕೇ ಹೊರತು, ಮೋಸ-ವಂಚನೆ-ಕಳ್ಳತನ ಮುಂತಾದ ಕೆಟ್ಟ ಕೆಲಸಗಳನ್ನು ಮಾಡಿ 'ಕೃಷ್ಣಾರ್ಪಣ' ಎಂದು ದೇವರಿಗೆ ಅರ್ಪಿಸಬಾರದು. ಅಂತಹ ಕೆಲಸಗಳನ್ನು ಮಾಡಬಾರದು, ಎಂದು ದೇವರ ಆದೇಶವಿರುವಾಗ ಆ ಆದೇಶವನ್ನು ಮೀರಿ ಕೆಟ್ಟ ಕೆಲಸಗಳನ್ನು ನಡೆಸುವಾಗ ದೇವರ ಮೇಲೆ ಗೌರವ-ಭಕ್ತಿಗಳು ಬರಲು ಸಾಧ್ಯವೇ ಇಲ್ಲ.

ಆದ್ದರಿಂದ ಒಳ್ಳೆಯ ಕೆಲಸಗಳನ್ನು ಭಗವದ್ಭಕ್ತಿಯಿಂದ ನೆರವೇರಿಸಿ 'ಇದರಿಂದ ದೇವರು ಪ್ರೀತನಾಗಲಿ' ಎಂದು ತಿಳಿದುಕೊಂಡರೆ ಅದೊಂದು ದೊಡ್ಡ ದೇವರ ಪೂಜೆಯಾಗುತ್ತದೆ.

**ಕರ್ಮ-ಅಕರ್ಮ :**

'ಕರ್ಮವನ್ನು ಮಾಡುವಾಗ ಅಕರ್ಮವನ್ನು ತಿಳಿಯಬೇಕು, ಅಕರ್ಮದಲ್ಲಿರುವಾಗ ಕರ್ಮವನ್ನು ತಿಳಿಯಬೇಕು'. ಇದು ಭಗವದ್ಗೀತೆ ನೀಡಿದ ಒಗಟಿನ ಸಂದೇಶ.

'ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿರುವಾಗ ನಾನೇನೂ ಮಾಡುತ್ತಿಲ್ಲ ಎಂದು ತಿಳಿಯಬೇಕು. ನಿದ್ರಾಕಾಲದಲ್ಲಿ, ಕರ್ಮ ಮಾಡದಿರುವಾಗ ನಾನು ಕರ್ಮವನ್ನು ಮಾಡುತ್ತಿದ್ದೇನೆ ಎಂದು ತಿಳಿಯಬೇಕು' ಇದು ಗೀತೆ ನೀಡುವ ಸಂದೇಶ.



ಹಾಗೆಂದರೇನು?

ನಾವು ದೊಡ್ಡ ದೊಡ್ಡ ಕೆಲಸವನ್ನು ಮಾಡುತ್ತೇವೆ. ಅದನ್ನು ಮಾಡಿದಾಗಲೆಲ್ಲ 'ಇದನ್ನು ನಾನು ಮಾಡಿದೆ' ಎಂದು ತಿಳಿದುಕೊಳ್ಳುತ್ತೇವೆ. ಹೀಗೆ ತಿಳಿದರೆ ನಾವೂ ಒಂದು ವಿಧದ ಜೀವ-ಬ್ರಹ್ಮಾಭೇದವನ್ನು ತಿಳಿಯುವ ಅದ್ವೈತಿಗಳೇ ಆಗುತ್ತೇವೆ. ಏಕೆಂದರೆ, ದೇವರು ಮಾಡಿಸಿದ್ದನ್ನು ಮರೆತು 'ನಾನೇ ಮಾಡಿದ್ದೇನೆ' ಎಂದು ತಿಳಿಯುವುದು 'ದೇವರೇ ನಾನು' ಎಂದಂತೆ. ಅದಕ್ಕಾಗಿ ಗೀತೆ ಹೇಳುತ್ತಿದೆ- 'ನೀನು ಕರ್ಮ ಮಾಡುತ್ತಿದ್ದರೂ ನೀನು ಮಾಡುತ್ತಿಲ್ಲ, ದೇವರು ಮಾಡಿಸುತ್ತಿದ್ದಾನೆ' ಎಂದು ತಿಳಿ. ಇದೇ 'ಅಕರ್ಮ' ಭಾವನೆ. ಹೀಗೆ ನಾವು ಕರ್ತವ್ಯವನ್ನು ನೆರವೇರಿಸುತ್ತಿರುವಾಗ 'ಇದನ್ನು ಒಳಗಿದ್ದು ನನ್ನಿಂದ ದೇವರೇ ಮಾಡಿಸುತ್ತಾನೆ' ಎಂದು ತಿಳಿಯುವುದು 'ಕರ್ಮಣಿ ಅಕರ್ಮ ಯಃ ಪಶ್ಯೇತ್' ಎನ್ನುವ ಗೀತೆಯ ಅರ್ಥ.

ಅದರಂತೆ 'ಅಕರ್ಮಣಿ ಚ ಕರ್ಮ'- ಎಂದರೆ, ನಾವು ಕರ್ಮ ಮಾಡದ ಸ್ವಪ್ನ-ನಿದ್ರಾವಸ್ಥೆಗಳಲ್ಲಿ ದೇವರು ನಮ್ಮೊಳಗಿದ್ದು ಕೆಲಸವನ್ನು ನಡೆಸುತ್ತಿರುತ್ತಾರೆ. ಅನೇಕ ವಿಧವಾದ ಸ್ವಪ್ನಗಳನ್ನು ತೋರಿಸುತ್ತಾ, ಗಾಢ ನಿದ್ರೆಯ ಕಾಲದಲ್ಲಿ ಆ ನಿದ್ದೆಯ ಆನಂದವನ್ನು ನೀಡುತ್ತಾ ಪರಮಾತ್ಮ ನಮಗಾಗಿ ಕ್ರಿಯಾಶೀಲನಾಗಿರುತ್ತಾನೆ ಎಂದರ್ಥ.



ಹೀಗೆ ಎಚ್ಚರ ನಿದ್ರೆ ಎರಡೂ ಕಾಲದಲ್ಲಿ ನಮ್ಮಿಂದ ನಡೆಯುವ ಎಲ್ಲ ಕ್ರಿಯೆಗಳಿಗೂ ದೇವರೇ ಕಾರಣ ಎಂದು ತಿಳಿದವನೇ-

**'ಸ ಬುದ್ಧಿಮಾನ್ ಮನುಷ್ಯೇಷು'**

**ಜೀವನವೇ ಯಜ್ಞ :**

ಸಾಮಾನ್ಯಾಗಿ ನಾವು ದೇವರ ಪೂಜೆ, ಪ್ರದಕ್ಷಿಣೆ, ನಮಸ್ಕಾರಗಳನ್ನು ಮಾತ್ರ ದೇವರ ಸೇವೆ ಎಂದು ತಿಳಿಯುತ್ತೇವೆ. ಹೀಗೆ ತಿಳಿದು ದೇವರ ಪೂಜೆಯನ್ನು ಒಂದೇ ಗಂಟೆಗೆ ಸೀಮಿತ ಗೊಳಿಸುತ್ತೇವೆ. ದಿವಸಕ್ಕೆ ಒಂದು ಗಂಟೆ ಪೂಜೆ ನಡೆಸಿದರೆ, ವಾರಕ್ಕೊಮ್ಮೆ ರಾಯರ ಗುಡಿಗೆ ಹೋದರೆ ದೇವರ ಬಗ್ಗೆ ನಮ್ಮ ಕರ್ತವ್ಯ ಮುಗಿಯಿತು ಎಂದು ತಿಳಿಯುತ್ತೇವೆ. ಇಷ್ಟನ್ನು ಪೂರೈಸಿದರೆ ನಮ್ಮ ದೈನಂದಿನ ವ್ಯವಹಾರಕ್ಕೆ 'ಲೈಸನ್ಸ್' ಸಿಕ್ಕಂತೆ; ಆಮೇಲೆ ಏನು ಬೇಕಾದರೂ ಮಾಡಬಹುದು. ಲಂಚ ಪಡೆಯಬಹುದು, ಕೋರ್ಟಿನಲ್ಲಿ 'ಸತ್ಯ ಹೇಳುತ್ತೇನೆ' ಎಂದು ಪ್ರತಿಜ್ಞೆ ಮಾಡಿ ಸುಳ್ಳು ಹೇಳಬಹುದು. ಹೀಗೆಂದು ತಿಳಿಯುತ್ತೇವೆ.

ಆದರೆ, ಇದು ತಪ್ಪು. ಧರ್ಮ ಜೀವನದ ಒಂದು ಭಾಗಕ್ಕೆ ಸಂಬಂಧಿಸಿದ್ದಲ್ಲ. ಅದು ನಮ್ಮ ದೈನಂದಿನದ ಎಲ್ಲ ವ್ಯವಹಾರಗಳಲ್ಲೂ ಹಾಸು ಹೊಕ್ಕಾಗಿರಬೇಕು. ಮನೆಯಲ್ಲಿ ಪುಸ್ತಕ, ಹಣ ಮುಂತಾದ ವಸ್ತುಗಳಿಗೆ ಸೀಮಿತ ಜಾಗವಿರುತ್ತದೆ. ಅವುಗಳನ್ನು ಕಪಾಟಿನ ಒಳಗೆ ಇಡುತ್ತೇವೆ. ಆದರೆ ಬೆಳಕು

ಹೀಗಲ್ಲ. ಅದನ್ನು ಕಪಾಟಿನೊಳಗೆ ಬೀಗ ಹಾಕಿ ಇಡುವುದಿಲ್ಲ. ಅದು ಮನೆಯಲ್ಲಿ ಹರಡಿಕೊಂಡಿರಬೇಕು. ಅದರಂತೆ ಧರ್ಮವೂ. ಅದು ಜೀವನದ ಎಲ್ಲ ವ್ಯವಹಾರಗಳಲ್ಲೂ ಬೆರೆತಿರಬೇಕು. ಸರಕಾರೀ ಉದ್ಯೋಗ, ವೈದ್ಯರ ಶುಶ್ರೂಷೆ, ಮಹಿಳೆಯ ಕರ್ತವ್ಯ ಇವೆಲ್ಲವೂ ದೇವರ ಪೂಜೆಯಾಗಬೇಕು; ದೇವರು ಮೆಚ್ಚುವಂತೆ ನಡೆಯಬೇಕು. ಈ ಅನುಸಂಧಾನವನ್ನು ಬೆಳೆಸಿಕೊಂಡಾಗ ನಮ್ಮೆಲ್ಲಾ ದೈನಂದಿನ ಚಟುವಟಿಕೆಗಳೂ ಯಜ್ಞವೆನಿಸಿ ಸಮಾಜದ ಚಿತ್ರವೇ ಬದಲಾದೀತು!

**ಧರ್ಮಕ್ಕೆ ಹೆದರಬೇಕಾಗಿಲ್ಲ :**

ಚಿಕ್ಕ ಮಕ್ಕಳು 'ಗುಮ್ಮ'ನಿಗೆ ಹೆದರುವಂತೆ ನಾವು 'ಧರ್ಮ'ಕ್ಕೆ ಹೆದರುತ್ತೇವೆ. ಮಡಿ, ಮೈಲಿಗೆ, ಪೂಜೆ-ಪುರಸ್ಕಾರಗಳೇ ಧರ್ಮವಲ್ಲ. ಧರ್ಮ ಅತ್ಯಂತ ಸರಳವಾದುದು. ನಾವು ಜೀವನಕ್ಕಾಗಿ ಅವಲಂಬಿಸಿದ ಉದ್ಯೋಗವೂ ಪವಿತ್ರಭಾವನೆಯ ಹಿನ್ನೆಲೆಯಲ್ಲಿ ಧರ್ಮವಾಗಬಹುದು.

**ತುಲಾಧಾರ :**

'ತುಲಾಧಾರ' ಒಬ್ಬ ವ್ಯಾಪಾರಿ. 'ಜಾಜಲಿ' ಜಟೆ ಬೆಳೆಸಿದ ತಪಸ್ವಿ. ಜಟೆ ಬೆಳೆದಂತೆ ಜಾಜಲಿಯ ಅಹಂಕಾರವೂ ಬೆಳೆದಿತ್ತು. ಅಂತಹ ತಪಸ್ವಿಯೊಬ್ಬ ಧರ್ಮೋಪದೇಶಕ್ಕಾಗಿ ತುಲಾಧಾರನ ಬಳಿ ಬಂದ.



ತುಲಾಧಾರ ಹೇಳಿದ- 'ನನಗೆ ನನ್ನ ತಕ್ಕಡಿಯೇ ಗುರು. ಅದು ಎಲ್ಲರಿಗೂ ಸಮವಾಗಿ ತೂಗುತ್ತದೆ. ಬಡವರು-ಬಲ್ಲಿದರು ಎಂಬ ಭೇದ ಈ ತಕ್ಕಡಿಗಿಲ್ಲ. ಈ ತಕ್ಕಡಿಯಂತೆ ನಾನು ಯಾರಿಗೂ ದ್ರೋಹ ಮಾಡುವುದಿಲ್ಲ. ''ಅದ್ರೋಹೇಣೈವ ಭೂತಾನಾಮ್''. ಅಥವಾ ವ್ಯಾಪಾರದಲ್ಲಿ ಕೆಲವೊಮ್ಮೆ ದ್ರೋಹ ಅನಿವಾರ್ಯವಾದುದರಿಂದ ''ಅಲ್ಪದ್ರೋಹೇಣ ವಾ ಪುನಃ'' 'ಸಾಧ್ಯವಾದಷ್ಟು ಕಡಿಮೆ ಮಟ್ಟದ ದ್ರೋಹವನ್ನು ಮಾಡುತ್ತೇನೆ.' ಇದು ಒಬ್ಬ ವ್ಯಾಪಾರಿಯು ತಪಸ್ವಿಗೆ ತಿಳಿಸಿದ ಸತ್ಯ. ಈ ಕಥೆ ಮಹಾಭಾರತದಲ್ಲಿ ಬಂದಿದೆ.

ಕಾಡಿನಲ್ಲಿದ್ದ ತಪಸ್ವಿಗಿಂತಲೂ ನಾಡಿನಲ್ಲಿ ತನ್ನ ಉದ್ಯೋಗವನ್ನು ಮಾಡುತ್ತಿದ್ದ ಒಬ್ಬ ವ್ಯಾಪಾರಿ ಹೆಚ್ಚು ಧಾರ್ಮಿಕ ಎಂಬ ಸಂದೇಶವನ್ನು ವ್ಯಾಸರು ಈ ಮೂಲಕ ತಿಳಿಸಿದ್ದಾರೆ.

**ಚಾತುರ್ವರ್ಣ್ಯ :**

ಭಗವದ್ಗೀತೆಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನು ತಾನು ಸೃಷ್ಟಿ ಮಾಡಿರುವುದಾಗಿ ಶ್ರೀಕೃಷ್ಣ ಹೇಳಿದ್ದಾನೆ. ಇಲ್ಲಿ ಹೇಳಿದ ಈ ಜಾತಿವ್ಯವಸ್ಥೆ ಹಿಂದೂ ಜನಾಂಗಕ್ಕೆ ಮಾತ್ರ ಸೀಮಿತವಾದುದಲ್ಲ; ಪ್ರಪಂಚದ ಸಕಲ ಸಜ್ಜನ ಸಮುದಾಯಕ್ಕೆ ಸಂಬಂಧಪಟ್ಟದ್ದು. ಅದು ಶರೀರದ ಹುಟ್ಟನ್ನು ಆಧರಿಸಿದ ವ್ಯವಸ್ಥೆಯಲ್ಲ; ಅಂತರಂಗದ ಗುಣಧರ್ಮಗಳಿಗೆ



ಸಂಬಂಧಪಟ್ಟ ವ್ಯವಸ್ಥೆ. ಜ್ಞಾನ-ಶಮ-ದಮ-ಸೇವೆ ಮುಂತಾದ ಆತ್ಮನ ಗುಣಗಳನ್ನು ಆಧರಿಸಿ ಬ್ರಾಹ್ಮಣ್ಯಾದಿ ವ್ಯವಸ್ಥೆಯನ್ನು ಇಲ್ಲಿ ಗುರುತಿಸಲಾಗಿದೆ.

***'ಸ್ವಾಭಾವಿಕೋ ಬ್ರಾಹ್ಮಣಾದಿಃ ಶಮಾದ್ಯೈರಭಿಧೀಯತೇ'***

'ಶಮಾದಿ ಗುಣಗಳುಳ್ಳವನೇ ಸ್ವಭಾವತಃ ಬ್ರಾಹ್ಮಣ'.

***'ಯೋನಿಭೇದಕೃತೋ ಭೇದಃ***
***ಜ್ಞೇಯಃ ಔಪಾಧಿಕಸ್ತ್ವಯಮ್'***

'ತಂದೆ-ತಾಯಿಗಳಿಂದ ಬರುವ ಜಾತಿ ವ್ಯವಸ್ಥೆ ದೇಹಕ್ಕೆ ಸೀಮಿತವಾಗಿದ್ದು ಔಪಾಧಿಕವೆನಿಸಿದೆ.'

ಹೀಗೆ ಆಚಾರ್ಯರು ಗೀತಾತಾತ್ಪರ್ಯದಲ್ಲಿ ಹೇಳಿದ್ದಾರೆ.

ಈ ದೃಷ್ಟಿಯಲ್ಲಿ ಒಂದು ಬ್ರಾಹ್ಮಣಶರೀರದೊಳಗೆ ಶೂದ್ರ ಗುಣಧರ್ಮದ ಆತ್ಮನೂ ಇರಬಹುದು. ಶೂದ್ರಶರೀರದೊಳಗೆ ಬ್ರಾಹ್ಮಣಗುಣ ಧರ್ಮದ ಆತ್ಮನೂ ಇರಬಹುದು. ಹೀಗೆ ಗೀತೆ ಹೇಳಿದ ಜಾತಿವ್ಯವಸ್ಥೆ ವಿಶ್ವವ್ಯಾಪಿಯಾದುದು.

**ಶ್ರೀಮಧ್ವಭಾಷ್ಯದ ವೈಶಿಷ್ಟ್ಯ :**

ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಅರ್ಜುನನಿಗೆ

***'ಕುರು ಕರ್ಮೈವ ತಸ್ಮಾತ್ ತ್ವಮ್'***

ಎಂದು ಕರ್ತವ್ಯದ ಆಚರಣೆ ಅನಿವಾರ್ಯವೆಂದು ಉಪದೇಶಿಸಿದ್ದಾನೆ. ಅರ್ಜುನ ಜ್ಞಾನಿ. ಇದರಿಂದ ಜ್ಞಾನಿಗಳಿಗೂ ಕರ್ಮದ ವಿನಾಯಿತಿ ಇಲ್ಲವೆಂದು ತಿಳಿಯುತ್ತದೆ. ಆದರೆ,

***ಆರುರುಕ್ಷೋಃ ಮುನೇಃ ಯೋಗಂ***
***ಕರ್ಮ ಕಾರಣಮುಚ್ಯತೇ ।***
***ಯೋಗಾರೂಢಸ್ಯ ತಸ್ಯೈವ***
***ಶಮಃ ಕಾರಣಮುಚ್ಯತೇ ॥***

ಎಂಬ ಶ್ಲೋಕದಲ್ಲಿ'ಅಪರೋಕ್ಷವಾಗುವವರೆಗೆ ಮಾತ್ರ ಕರ್ತವ್ಯದ ನಿಬಂಧನೆ; ಅಪರೋಕ್ಷವಾದ ಮೇಲೆ, ದೇವರನ್ನು ಕಂಡ ಯೋಗಿಗೆ ಯಾವ ಕರ್ತವ್ಯದ ನಿಬಂಧನೆಯೂ ಇಲ್ಲ' ಎಂದು ಹೇಳಿದ್ದಾನೆ. ಹೀಗೆ ಒಂದೆಡೆ 'ಜ್ಞಾನಿಯೂ ತನ್ನ ಕರ್ತವ್ಯವನ್ನು ಮಾಡಬೇಕು' ಎಂದು ಹೇಳಿ ಮತ್ತೊಂದೆಡೆ 'ಅವನಿಗೆ ಕರ್ತವ್ಯದ ನಿಬಂಧನೆ ಇಲ್ಲ' ಎಂದಿರುವುದು ವಿರುದ್ಧವಲ್ಲವೇ?

ಈ ಸಮಸ್ಯೆ ಲೋಕಮಾನ್ಯ ತಿಲಕರಿಗೂ ಬಂದಿತ್ತು. ಶ್ರೀಮಧ್ವಾಚಾರ್ಯರು ಈ ಗೊಂದಲವನ್ನು 'ಗೀತಾತಾತ್ಪರ್ಯ' ದಲ್ಲಿ ಪರಿಹರಿಸಿದ್ದಾರೆ. ಅದನ್ನು ನಮ್ಮ ಪರಮಗುರುಗಳಾದ ಶ್ರೀ ವಿಶ್ವಜ್ಞತೀರ್ಥರೂ ಉತ್ತರಾದಿ ಮಠದ ಶ್ರೀ ಸತ್ಯಧ್ಯಾನತೀರ್ಥರೂ ತಿಲಕರಿಗೆ ತಿಳಿಸಿದರು. ಅದರಿಂದ ಅವರಿಗೆ ಸಮಾಧಾನವಾಯಿತು.

ಆಚಾರ್ಯರು ತಿಳಿಸಿರುವ ಸಮಾಧಾನ ಹೀಗಿದೆ-



ನಮಗೆ ಎರಡು ವಿಧವಾದ ಕರ್ತವ್ಯಗಳಿವೆ. ಒಂದು ನಮ್ಮ ಸಂಧ್ಯಾವಂದನಾದಿ ಧಾರ್ಮಿಕ ಕರ್ತವ್ಯಗಳು; ಮತ್ತೊಂದು ಲೋಕಸೇವೆ. ಅಜ್ಞಾನಿಗಳು ಇವೆರಡನ್ನೂ ಮಾಡಲೇಬೇಕು.

***'ನಾನಾಜನಸ್ಯ ಶುಶ್ರೂಷಾ ಕರ್ತವ್ಯಾ ಕರವನ್ಮಿತೇಃ'***

ಇದು ಸರಕಾರಕ್ಕೆ ಕರವನ್ನು (Tax) ನೀಡಬೇಕಾದಷ್ಟು ಖಡ್ಡಾಯದ ಕೆಲಸ. ಆದರೆ ಯೋಗಿಗಳಿಗೆ ಲೋಕಸೇವಾ ಕಾರ್ಯವನ್ನು ಮಾಡಲೇಬೇಕೆಂಬ ನಿರ್ಬಂಧವಿಲ್ಲ. ಅದು ಅವರಿಗೆ ಐಚ್ಛಿಕ. ಹಿಮಾಲಯದಲ್ಲಿರುವ ಸಿದ್ಧಪುರುಷರು ಅವರ ಸಾಧನಾನುಷ್ಠಾನವನ್ನು ಮಾಡುತ್ತಲಿರುತ್ತಾರೆ. ಲೋಕದ ಗೊಡವೆಯೇ ಅವರಿಗಿಲ್ಲ. ಅಂತಹವರು ಲೋಕಸೇವೆಯನ್ನು ಮಾಡದಿದ್ದರೂ ಬಾಧಕವಿಲ್ಲ.

ಹೀಗೆ ಮಧ್ವಾಚಾರ್ಯರ ಗೀತಾವ್ಯಾಖ್ಯಾನ ಗೀತೆಯಲ್ಲಿ ಬರುವ ದೊಡ್ಡ ಗೊಂದಲಕ್ಕೆ ಸೂಕ್ತ ಸಮಾಧಾನವನ್ನು ನೀಡಿದೆ.

**ಉತ್ತಮ ಭಕ್ತರು :**

ನಮ್ಮಲ್ಲಿ ಕೆಲವರು ಸ್ವಾರ್ಥದ ಸಿದ್ಧಿಗಾಗಿ ಇತರರ ಮುಂದೆ ಕೈ ಚಾಚುತ್ತಾರೆ. ಈಶಾವಾಸ್ಯೋಪನಿಷತ್ತು ಇದನ್ನು ನಿಂದಿಸುತ್ತದೆ- 'ಮಾಗೃಧಃ ಕಸ್ಯಸ್ವಿದ್ಧನಮ್' - ದೇವರು ಕೊಟ್ಟಿದ್ದರಲ್ಲಿ ತೃಪ್ತಿ ಪಡು, ಮತ್ತೊಬ್ಬರನ್ನು ಬೇಡದಿರು' ಇದು ವೇದಪುರುಷನ ಆದೇಶ.



ಇನ್ನು ಕೆಲವರು, 'ಎಲ್ಲರ ಅಂತರ್ಯಾಮಿಯಾದವನು ದೇವರು' ಎಂದು ತಿಳಿದು ಸ್ವಾರ್ಥಸಿದ್ಧಿಗಾಗಿ ದೇವರನ್ನು ಬೇಡುತ್ತಾರೆ. ಇವರು ಮಧ್ಯಮರು.

ಮತ್ತೆ ಕೆಲವರು, ದೇವರಲ್ಲೂ ಸ್ವಾರ್ಥವನ್ನು ಬೇಡುವುದಿಲ್ಲ. ಅವರದು ನಿರ್ವ್ಯಾಜ ಪ್ರೇಮ. ಜ್ಞಾನ, ಭಕ್ತಿ, ದೇವರ ತೃಪ್ತಿ ಇವು ಮೂರನ್ನೇ ದೇವರಿಂದ ಅವರು ಕೇಳಿ ಪಡೆಯುತ್ತಾರೆ. ಇವರು ಉತ್ತಮ ಭಕ್ತರು. ಅವರಿಗೆ ಭಾಗವತೋತ್ತಮರೆಂದು ಹೆಸರು. ಬ್ರಹ್ಮದೇವರು, ವಾಯು-ಭಾರತಿಯರು ಅಂತಹ ಭಾಗವತೋತ್ತಮರು.

**ಬದುಕಲು ಅಧಿಕಾರ :**

ತನ್ನ ಕರ್ತವ್ಯವನ್ನು ಮಾಡುವವನಿಗೆ ಮಾತ್ರ ಈ ಜಗತ್ತಿನಲ್ಲಿ ಬದುಕಲು ಅಧಿಕಾರ. ಬಡವನಾದರೂ ಕರ್ತವ್ಯ ಮಾಡುತ್ತಿದ್ದರೆ ತನ್ನ ಹೊಟ್ಟೆ ತುಂಬುವಷ್ಟು ಮತ್ತೊಬ್ಬರಿಂದ ಕೇಳಿ ಪಡೆದು ಉಣ್ಣುವ ಅಧಿಕಾರ ಅವನಿಗಿದೆ. ಶ್ರೀಮಂತನಾದರೂ ತನ್ನ ಕರ್ತವ್ಯವನ್ನು ಮಾಡದವನಿಗೆ ತನ್ನದನ್ನೇ ಉಣ್ಣಲು ಅಧಿಕಾರವಿಲ್ಲ.

ಭೀಮಸೇನ ಏಕಚಕ್ರ ನಗರದಲ್ಲಿರುವಾಗ ಆ ಗ್ರಾಮದ ಜನರಿಂದ 'ಹುಂಕಾರ' ಮಾಡಿ ತನ್ನ ಪರಿವಾರಕ್ಕೆ ಬೇಕಾಗುವಷ್ಟು ಆಹಾರವನ್ನು ಸಂಗ್ರಹಿಸುತ್ತಿದ್ದ. ಇದು ಬಲಾತ್ಕಾರವಲ್ಲ. ಅವನು ಕ್ಷತ್ರಿಯನಾಗಿ ಬಕಾಸುರನಿಂದ ಬಂದ ತೊಂದರೆಯಿಂದ ಅಲ್ಲಿನ

ನಾಗರಿಕರ ರಕ್ಷಣೆ ಮಾಡಿದ್ದ. ಹೀಗೆ ತನ್ನ ಕರ್ತವ್ಯವನ್ನು ಪಾಲಿಸಿದ ಭೀಮಸೇನನಿಗೆ ಜನರಿಂದ ತನ್ನ ಹೊಟ್ಟೆ ತುಂಬುವಷ್ಟು ಪಡೆಯಲು ಅಧಿಕಾರವಿದೆ.

**ಸಂಶಯಾತ್ಮಾ ವಿನಶ್ಯತಿ :**

ಧರ್ಮರಾಜನಿಗೆ ಶ್ರೀಕೃಷ್ಣ ಆದೇಶಿಸಿದ- '' 'ಅಶ್ವತ್ಥಾಮಾ ಹತಃ' ಎಂದು ಹೇಳು''; ಆದರೆ ಸುಳ್ಳು ಹೇಳಿದಂತಾಗುವುದೇನೋ ಎಂದು ಧರ್ಮರಾಜ ಕೃಷ್ಣನ ಮಾತಿನಲ್ಲಿ ಸಂಶಯಿಸಿದ. ಅದರಿಂದ ಅವನಿಗೆ ನರಕದರ್ಶನದ ಕ್ಲೇಶ ಬಂದೊದಗಿತು.

ವೇದ-ಉಪನಿಷತ್ತುಗಳು ದೇವರ ಆದೇಶ. ಅದರ ಬಗ್ಗೆ ಸಂಶಯ ತಾಳಬಾರದು. ಸಂಶಯಾತ್ಮಕವಾದ ಜ್ಞಾನ ಎಂದೂ ನಮ್ಮ ಉದ್ಧಾರಕ್ಕೆ ಕಾರಣವಾಗದು.

**ಧ್ಯಾನದಲ್ಲಿ ಅವಸರ ಸಲ್ಲದು :**

ದೇವರ ದರ್ಶನವನ್ನು ಪಡೆಯಬೇಕಾದರೆ ಧ್ಯಾನ ಆವಶ್ಯಕ. ಆದರೆ ಅದಕ್ಕೆ ಅವಸರ ಪಡಬಾರದು. ಕರ್ಮಮಾರ್ಗದ ಮೂಲಕವಾಗಿಯೇ ಧ್ಯಾನಮಾರ್ಗಕ್ಕೆ ಹೋಗಬೇಕು.

ಕೃಷಿಕನ ಮುಖ್ಯ ಉದ್ದೇಶ ಧಾನ್ಯ. ಆದರೆ ಅದಕ್ಕಾಗಿ ಅವಸರ ಪಟ್ಟು ನೆಲವನ್ನು ಉಳದೆ ಬಿತ್ತಿದರೆ ಧಾನ್ಯ ಸಮೃದ್ಧಿಯಾಗ



ಲಾರದು. ಅದರಂತೆ ಮನಸ್ಸಿನ ಕೊಳೆಯನ್ನು ಕರ್ಮದಿಂದ ತೊಳೆಯದೆ ಅಶುದ್ಧ ಮನಸ್ಸಿನಿಂದ ಧ್ಯಾನ ಮಾಡುವುದು ಉಳದ ನೆಲದಲ್ಲಿ ಸಸಿ ನೆಟ್ಟಂತೆ.

(ಸಂಗ್ರಹ : ಶ್ರೀಹರಿದಾಸ ಭಟ್ಟ)


**ಶ್ರೀಗಳವರು ತಾವೇ ಬರೆದು ನೀಡಿದ ಉಪಸಂಹಾರ :**

ನಿಷ್ಕಾಮನೆಯಿಂದ ಮಾಡಿದ ಕರ್ತವ್ಯವು ಪರಿಶುದ್ಧವೂ, ಪರಿಪೂರ್ಣವೂ ಆಗಿರುವುದು. ಪ್ರತಿಫಲದ ಅಪೇಕ್ಷೆಯಿಂದ ದಾದಿಯು ಮಗುವಿಗೆ ಮಾಡುವ ಶುಶ್ರೂಷೆಗೂ, ಯಾವುದೇ ಪ್ರತಿಫಲದ ಅಪೇಕ್ಷೆಯಿಲ್ಲದೆ ಮಾತೃಹೃದಯದಿಂದ, ಪ್ರೇಮ ವಾತ್ಸಲ್ಯಗಳಿಂದ ತಾಯಿಯು ಮಾಡುವ ಸೇವೆಗೂ ಅಂತರ ವಿಲ್ಲವೇ? ಒಬ್ಬ ವ್ಯಾಪಾರಿಯು ಹಣ ಗಳಿಸಬೇಕೆಂಬ ಉದ್ದೇಶ ದಿಂದ ಸಿದ್ಧಪಡಿಸುವ ತಿಂಡಿ ಪರಿಶುದ್ಧವೂ ಆರೋಗ್ಯಕರವೂ ಆಗಿರಬೇಕಿಲ್ಲ. ಆದರೆ ತಾಯಿಯು ಯಾವ ಲಾಭದ ಉದ್ದೇಶವೂ ಇಲ್ಲದೆ ಮಗುವಿಗಾಗಿ ಪ್ರೀತಿಯಿಂದ ಸಿದ್ಧಪಡಿಸುವ ಪದಾರ್ಥವು ಅತ್ಯಂತ ಹಿತಕರವಾಗಿರುತ್ತದೆ. ಅದರಂತೆ ಫಲದ ಅಪೇಕ್ಷೆಯಿಲ್ಲದೆ ಭಗವಂತನ ಪ್ರೀತಿ ಹಾಗೂ ಜನರ ಕಲ್ಯಾಣದ ಉದ್ದೇಶದಿಂದ ಮಾಡುವ ಕಾರ್ಯಗಳು ನಿರ್ಮಲವೂ ಲೋಕಹಿತಕಾರಿಯೂ ಆಗಿರುತ್ತವೆ. ಗೀತೆಯು ಹೇಳಿದ ಕರ್ಮಯೋಗವು ನಮ್ಮ ಆತ್ಮದ ಉದ್ಧಾರಕ್ಕೆ ಕಾರಣವಾಗುವುದರ ಜೊತೆಗೆ ಸ್ವಾರ್ಥರಹಿತ ಕರ್ತವ್ಯ



ದೃಷ್ಟಿಯನ್ನು ಬೆಳೆಸಿ ಸಮಾಜದ ಹಿತವನ್ನೂ ಸಾಧಿಸುತ್ತದೆ. ಗೀತೆಯ ಈ ಸಂದೇಶದಿಂದ ದೇವರಿಗಾಗಿ, ಸಮಾಜಕ್ಕಾಗಿ, ನಮ್ಮ ಆತ್ಮದ ಉನ್ನತಿಗಾಗಿ ನಿರ್ಮಲ ಭಾವನೆಯಿಂದ ಭಕ್ತಿಯಿಂದ ಕರ್ತವ್ಯವನ್ನು ನಡೆಸುವ ಪ್ರವೃತ್ತಿಯು ನಮ್ಮ ಜನತೆಯಲ್ಲಿ ಬೆಳೆಯಲಿ ಎಂದು ಆಶಿಸುತ್ತೇವೆ.

ಇತ್ಯನೇಕ ನಾರಾಯಣ ಸ್ಮರಣೆಗಳು



ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು
(ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿ)

0-0-0